Swabhimani Sahakari

Pages : 28 / 20₹

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 11
November - 2026

ಕನ್ನಡ ತಾಯಿಗೆ ಮಣಿವಾ ನಾವ್ ಕನ್ನಡಿಗರೆಂದು ಕುಣಿವ

-ಪ್ರೊ.ಎಂ.ಡಿ.ಸೀತಾರಾಮಯ್ಯ

ಧ್ಯೇಯ:
ಸಹಕಾರ ಸಂಸ್ಥೆಗಳ
ಬೆಳವಣಿಗೆಯಲ್ಲಿ
ಉತ್ತಮ ಪರಿಸರ,
ತಂತ್ರಜ್ಞಾನ, ಕೌಶಲ್ಯಾಧಾರಿತ,
ವೃತ್ತಿಪರ ಸೇವೆ

73ನೇ ಸಹಕಾರ ಸಪ್ತಾಹ 2026

ನವೆಂಬರ್ 14 ರಿಂದ 20

ನವೆಂಬರ್ 1೦
ದೀಪಾವಳಿ

ನವೆಂಬರ್ 27
ಕನಕದಾಸ ಜಯಂತಿ

ಸೌಹಾರ್ದ ಸಹಕಾರಿಗಳ ಸಂಖ್ಯೆ: 6877

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1760



ಜಿ. ನಂಜನಗೌಡ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು. ಬೆಳಕಿನ ಹಬ್ಬ ಜ್ಞಾನದ ಬೆಳಕನ್ನು ಹರಡುವ ಹಬ್ಬ ದೀಪಾವಳಿ. ದೇವರು ಎಲ್ಲರ ಬಾಳಿನಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿಯ ಬೆಳಕನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಸಂಪನ್ಮೂಲ ವ್ಯಕ್ತಿಗಳ ಸಭೆ – ತರಬೇತಿ ಕಾರ್ಯಕ್ರಮಗಳಿಗೆ ಉತ್ತಮ ಮಾರ್ಗದರ್ಶನ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು. ಬೆಳಕಿನ ಹಬ್ಬ ಜ್ಞಾನದ ಬೆಳಕನ್ನು ಹರಡುವ ಹಬ್ಬ ದೀಪಾವಳಿ. ದೇವರು ಎಲ್ಲರ ಬಾಳಿನಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿಯ ಬೆಳಕನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ. ಸಂಯುಕ್ತ ಸಹಕಾರಿ ತಮಗೆ ತಿಳಿದಂತೆ ರಾಜದಾದ್ಯಂತ ವರ್ಷಪೂರ್ತಿ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗಾಗಿ ಅವರ ಜ್ಞಾನ ಮಟ್ಟವನ್ನು ಅವರ ಕ್ರೀಯಾಶೀಲತೆಯನ್ನು ಹೆಚ್ಚಿಸುವುದಕ್ಕಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ತಮ್ಮಲ್ಲಿ ಅನೇಕರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಯೋಜನ ಪಡೆದಿದ್ದೀರಿ. ತಮ್ಮ ಸಹಕಾರಿಯ ಅಭಿವೃದ್ಧಿಗೆ ತಮ್ಮ ಪಾಲಿನ ಕೊಡುಗೆಯನ್ನು ನೀಡುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ.

ಸಂಯುಕ್ತ ಸಹಕಾರಿ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುತ್ತಿರುವ ತಜ್ಞರು ಮಹನೀಯರುಗಳ ಒಂದು ಸಭೆಯನ್ನು ಸಂಯುಕ್ತ ಸಹಕಾರಿಯು 2026ರ ಅಕ್ಟೋಬರ್ ಮಾಹೆಯ 15 ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಕರೆಗೆ ಮಾನ್ಯತೆ ನೀಡಿ 20 ಸಂಪನ್ಮೂಲ ವ್ಯಕ್ತಿಗಳು 3 ಜನರು ಆನ್‌ಲೈನ್‌ನಲ್ಲಿ ಸೇರಿದಂತೆ ಸಂಯುಕ್ತ ಸಹಕಾರಿಯ 15 ಅಧಿಕಾರಿಗಳು ಸೇರಿ ಒಟ್ಟಾರೆ 38 ಜನರು ಭಾಗವಹಿಸಿದ್ದರು. ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿಗಳು, ಸನ್ನದು ಲೆಕ್ಕ ಪರಿಶೋಧಕರು, ಬ್ಯಾಂಕಿಂಗ್ ತಜ್ಞರು, ಆಡಿಟ್ ಇಲಾಖೆಯ ನಿವೃತ್ತ ಅಧಿಕಾರಿಗಳು, ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರು, ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದಿರುವುದು ಸಂಯುಕ್ತ ಸಹಕಾರಿಯ ಹೆಮ್ಮೆಯ ವಿಷಯ. ಅವರೆಲ್ಲರಿಗೂ ಸಂಯುಕ್ತ ಸಹಕಾರಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸಭೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಗಳಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ತರಬೇತಿ ಕಾರ್ಯಕ್ರಮಗಳು ಹೆಚ್ಚು ಶಿಸ್ತು ಬದ್ಧವಾಗಿರುತ್ತವೆ. ಉತ್ತಮ ಗುಣಮಟ್ಟದ್ದಾಗಿವೆ ಎಂಬುದಾಗಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯ ಹಾಗೂ ಅವರು ಸೂಚಿಸಿರುವ ಹಾಗೂ ಅವರು ನೀಡಿರುವ ಅಭಿಪ್ರಾಯಗಳನ್ನು ಆಡಳಿತ ಮಂಡಳಿಯವರ ಗಮನಕ್ಕೂ ತರಲಾಗುತ್ತದೆ. ಅವರು ಹಲವಾರು ವಿಷಯಗಳ ಬಗ್ಗೆ ಅವರ ಸೂಚನೆಗಳನ್ನು ಸಂಯುಕ್ತ ಸಹಕಾರಿ ಮುಂಬರುವ ದಿನಗಳಲ್ಲಿ ಪೂರ್ಣ ಗಮನಹರಿಸುತ್ತದೆ. ವಿಶೇಷವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳ ವರ್ಗ, ಸಂಖ್ಯೆ, ಸ್ಥಳ, ಸಮಯ ಪಾಲನೆ, ವಿಷಯಗಳ ಆಯ್ಕೆ, ನಿಯೋಜಿಸುವ ಸಂಪನ್ಮೂಲ ವ್ಯಕ್ತಿಗಳ ಅನುಭವ, ಅವರಿಗೆ ಒದಗಿಸಬಹುದಾದ ಸೌಲಭ್ಯಗಳು, ಅಧ್ಯಯನ ಸಾಹಿತ್ಯಗಳ ಬಗ್ಗೆ ಹೆಚ್ಚು ಗಮನಹರಿಸಲಾಗುವುದು. ರಾಜ್ಯದ ಸೌಹಾರ್ದ ಸಹಕಾರಿಗಳು ಕೂಡ ತಮ್ಮ ಸಲಹೆ ಹಾಗೂ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿಯು ಅತ್ಯಂತ ಗೌರವದಿಂದ ಸ್ವೀಕರಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಸೂರ್ಯಕಾಂತ ರ್ಯಾಕಲೆ
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ. ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
youtube : https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ 2
ಸಂಪಾದಕೀಯ 3
ಜ್ಞಾನ ಜ್ಯೋತಿ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು 05–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು 17–20
ಲೇಖನಗಳು :
ಹರಿದು ಹಂಚಿ ಹೋದ ಕನ್ನಡ ಪ್ರದೇಶ ಪೂರ್ಣವಾಗಿ ಒಂದುಗೂಡಿಸಿದ ದಿನವೇ ಕರ್ನಾಟಕ ರಾಜ್ಯೋತ್ಸವ 21–22
ಸಹಕಾರದ ಜ್ಯೋತಿ: ಬೆಳಕಿನಿಂದ ಸಮೃದ್ಧಿಯೆಡೆಗೆ 25–26
ನಿಷ್ಠರಿಗೆ ಪ್ರೋತ್ಸಾಹ, ಭ್ರಷ್ಟರಿಗೆ ಶಿಕ್ಷೆ – ಹಾಗೂ ಸಹಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು – ಒಂದು ವಿಮರ್ಷೆ..... 27–28

ಸಂಪಾದಕೀಯ

ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ಜೊತೆಗೆ ನಿರ್ದೇಶಕರ ಹಾಗೂ ಸಿಬ್ಬಂದಿಯವರ ಅಭಿವೃದ್ಧಿ ಕಾರ್ಯಕ್ರಮಗಳ ಚಿಂತನೆ ಅಗತ್ಯ

ಸಹಕಾರಿ ಕ್ಷೇತ್ರದಲ್ಲಿ ಸದಸ್ಯರು, ನಿರ್ದೇಶಕರು ಹಾಗೂ ಸಿಬ್ಬಂದಿಯವರು ಸಂಘದ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಸದಸ್ಯರು ಸಂಘದ ಮಾಲೀಕರಾದರೆ ನಿರ್ದೇಶಕರು ಸಂಘವನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ನೀತಿ ನಿರೂಪಣೆ ಮಾಡುವವರು. ಸಿಬ್ಬಂದಿಯವರು ಸಂಘದ ಸೈನ್ಯ ಇದ್ದಂತೆ. ಎಲ್ಲ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಿರತರಾಗಿರುತ್ತಾರೆ. ಹೀಗಾಗಿ ಸಹಕಾರಿ ಕ್ಷೇತ್ರದಲ್ಲಿ ಎಲ್ಲರಿಗೂ ಅವರವರದ್ದೇ ಮಹತ್ವದ ಜವಾಬ್ದಾರಿ ಇದೆ.

ಸಹಕಾರಿ ಸಂಸ್ಥೆಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವಾಗ ಸದಸ್ಯರ ಹಿತಸಾಧನೆಗೆ ಆದ್ಯತೆ ಇರಬೇಕು. ಸದಸ್ಯರ ಹಿತ ಸಾಧನೆಗಾಗಿ ಆಡಳಿತ ಮಂಡಲಿಯರು ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತೀರ್ಮಾನವಾಗಿರುವ ಎಲ್ಲ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಮಾಡುವುದು ಅಗತ್ಯ. ಹೀಗಾಗಿ ಆಡಳಿತ ಮಂಡಳಿ ಸದಸ್ಯರು ತಮ್ಮ ಸಹಕಾರಿ ಸಂಘದ ನೀತಿ ನಿಯಮಗಳನ್ನು ಅಧ್ಯಯನ ಮಾಡಬೇಕು. ಸಹಕಾರಿ ಕಾಯ್ದೆಗಳ ಜ್ಞಾನವಿರಬೇಕು. ಸದಸ್ಯರ ಸಾಮಾನ್ಯ ಸಭೆಯ ನಡೆವಳಿಕೆಗನುಗುಣವಾಗಿ ಜಾರಿಮಾಡಬಹುದಾದ ಯೋಜನೆಗಳನ್ನು ಅಧ್ಯಯನ ಮಾಡಿರಬೇಕು. ಅದಕ್ಕಾಗಿ ಅವರಿಗೆ ಅದರ ಬಗ್ಗೆ ತರಬೇತಿ ನೀಡುವುದು ಅವಶ್ಯಕ. ನಿರ್ದೇಶಕರು ಕೇವಲ ಆಡಳಿತ ಮಂಡಳಿ ಸಭೆಗೆ ಹಾಜರಾಗುವುದಲ್ಲ. ಅವರ ಭಾಗವಹಿಸುವಿಕೆ ಸಂಘದ ಅಭಿವೃದ್ಧಿಗೆ ಪೂರಕವಾಗಿರಬೇಕು. ನಿರ್ದೇಶಕರಿಗೆ ಪ್ರತಿ ಮಾಹೆ ಜರುಗುವ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬಹುದಾದ ವಿಷಯಗಳ ಬಗ್ಗೆ ಟಿಪ್ಪಣಿ ರೂಪದಲ್ಲಿ ಪೂರ್ವಭಾವಿಯಾಗಿ ಮಾಹಿತಿ ಪಡೆದು ನಿರ್ದೇಶಕರ ಅಭಿವೃದ್ಧಿಗಾಗಿ ಅಧ್ಯಯನ ಪ್ರವಾಸ ಹಾಗೂ ಉಪನ್ಯಾಸಗಳ ವ್ಯವಸ್ಥೆ ನಿರಂತರ ನಡೆಯುವಂತೆ ಮಾಡಿದಾಗ ನಿರ್ದೇಶಕರ ಅಭಿವೃದ್ಧಿ ಸಾಧ್ಯವಾಗುತ್ತದೆ.

ಅದರಂತೆ ಸಿಬ್ಬಂದಿಯವರ ಅಭಿವೃದ್ಧಿಯೂ ಮಹತ್ವದ್ದು. ಸಿಬ್ಬಂದಿ ಸಂಬಳ ತೆಗೆದುಕೊಂಡು ಕೆಲಸ ಮಾಡುವವರು. ಅವರಿಗೆ ಅವರ ಕೆಲಸದ ಬಗ್ಗೆ ಜ್ಞಾನ ನೀಡುವ ವ್ಯವಸ್ಥೆಯಾಗಬೇಕು. ಅವನನ್ನು ನೇಮಕ ಮಾಡುವಾಗ ಕೆಲಸಕ್ಕೆ ಬೇಕಾಗುವಷ್ಟು ವಿದ್ಯಾರ್ಹತೆ ಹಾಗೂ ಅನುಭವಗಳ ಬಗ್ಗೆ ಪರಿಶೀಲನೆ ಮಾಡಬೇಕು. ಅನುಭವ ಇಲ್ಲದಿದ್ದರೆ ಅವನಿಗೆ ತರಬೇತಿ ನೀಡಿ ಅವನಲ್ಲಿ ಕಾರ್ಯಕ್ಷಮತೆ ಹಾಗೂ ಕ್ರೀಯಾಶೀಲತೆ ಅಭಿವೃದ್ಧಿ ಆಗುವ ಹಾಗೆ ನಿರಂತರ ತರಬೇತಿ ನೀಡಬೇಕು. ಸಿಬ್ಬಂದಿಯವರು ಪ್ರತಿ ತಿಂಗಳು ಕನಿಷ್ಟ 2 ದಿನಗಳು ತನ್ನ ಕಾರ್ಯಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಸ್ವ–ಅಧ್ಯಾಯ ಹಾಗೂ ತರಬೇತಿಗಾಗಿ ಮೀಸಲಿಡಬೇಕು. ಅದಕ್ಕಾಗಿ ಸಹಕಾರಿ ಸಂಸ್ಥೆಯವರು ವಿವಿಧ ತರಬೇತಿಗಳ ವ್ಯವಸ್ಥೆ ಮಾಡಬೇಕು ಮತ್ತು ಭಾಗವಹಿಸಲು ಕಡ್ಡಾಯವಾಗಿ ಕಳುಹಿಸಬೇಕು.

ತರಬೇತಿಯಲ್ಲಿ ಪಡೆದ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಸಿಬ್ಬಂದಿಗೆ ಸಹಕಾರಿ ಸಂಸ್ಥೆಗಳಲ್ಲಿ ಇನ್ಸೆಂಟಿವ್, ಬೋನಸ್ಸ್, ಬಡ್ತಿ ಮುಂತಾದ ವಿವಿಧ ರೀತಿಯ ಪ್ರೋತ್ಸಾಹ ಸೌಲಭ್ಯಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುವುದು ಅಗತ್ಯ. ನೌಕರರನ್ನು ಕೇವಲ ನೌಕರರನ್ನಾಗಿ ಕಾಣದೇ ಅವರು ಸಂಘದ ಅಭಿವೃದ್ಧಿಯಲ್ಲಿ ಪಾಲುದಾರರು ಎಂದು ತಿಳಿದುಕೊಂಡಾಗ ಸಹಕಾರಿಯ ಅಭಿವೃದ್ಧಿ ಸಾಧ್ಯವಾಗುತ್ತದೆ.

ಜ್ಞಾನ ಜ್ಯೋತಿ

"ಆನಂದ ಕರ್ಮ"

ಭಾಗ–2

ಕರ್ಮದಲ್ಲಿ ಉಪಜೀನವದ ಕರ್ಮ ಮತ್ತು ಆನಂದ ಕರ್ಮ ಎಂದು ಎರಡು ಪ್ರಕಾರ. ಜೀವನ ನಿರ್ವಹಣೆಗಾಗಿ ಹಸಿವೆ ತೃಷೆ ಹಿಂಗಿಸಿಕೊಳ್ಳುವುದಕ್ಕಾಗಿ ಮಾಡುವ ಕರ್ಮವು ಉಪಜೀವನ ಕರ್ಮವೆನಿಸುತ್ತದೆ. ಇದರ ಜೊತೆಗೆ ನಾವು ಕೆಲವೊಂದು ಕರ್ಮಗಳನ್ನು ನೆರೆಹೊರೆಯವರಿಗಾಗಿ, ಸಮಾಜಕ್ಕಾಗಿ, ದೇಶಕ್ಕಾಗಿ, ಧರ್ಮಕ್ಕಾಗಿ ನಿಸ್ವಾರ್ಥ ಭಾವದಿಂದ ಮಾಡಬೇಕಾಗುತ್ತದೆ. ಇವುಗಳಲ್ಲಿ ಆನಂದ ಕರ್ಮ ಎನ್ನುತ್ತಾರೆ. ಸಂತೋಷವೇ ಇಲ್ಲದಿದ್ರೆ ನಾವು ಎಷ್ಟು ಸಂಪತ್ತು ಗಳಿಸಿದರೇನು? ಆದ್ದರಿಂದ ಸಂಪತ್ತಿನ ಗಳಿಕೆಗಾಗಿ ಉಪಜೀವನ ಕರ್ಮಗಳನ್ನು ಹಾಗೂ ಸಂತೋಷಕ್ಕಾಗಿ ಆನಂದ ಕರ್ಮಗಳನ್ನು ನಾವು ಮಾಡುತ್ತಿರಬೇಕು.

ಈರ್ವರು ಸಿರಿವಂತ ದಂಪತಿಗಳು, ಮನೆಯಲ್ಲಿ ಊಟ ಮಾಡುತ್ತ ಕುಳಿತಿದ್ದಾರೆ ಅದು ಹಬ್ಬದ ದಿನವಾದುದರಿಂದ ಪಂಚಪಕ್ವಾನ್ನದಡಿಗೆಯ ರುಚಿಯನ್ನು ನೋಡುತ್ತಿದ್ದಾರೆ. ಅಷ್ಟರಲ್ಲಿ ಒಂದು ಬಡ ಮಗು ಬಾಗಿಲು ಬಡೆಯುತ್ತದೆ. ಅದಕ್ಕೆ ಹಬ್ಬದ ಊಟವು ಇಲ್ಲ. ಹಬ್ಬದ ಬಟ್ಟೆಯೂ ಇಲ್ಲ. ಹಸಿವೆಯನ್ನು ತಾಳಲಾರದೆ ಬಾಗಲು ತಟ್ಟಿದೆ. ತಕ್ಷಣ ದಂಪತಿಗಳಿಬ್ಬರೂ ಮಗುವನ್ನು ಒಳಗೆ ಕರೆದು ಹೊಟ್ಟೆ ತುಂಬ ಉಣಿಸಿ, ಮೈ ತುಂಬ ಬಟ್ಟೆ ತೊಡಿಸುತ್ತಾರೆ. ಮಗುವಿನ ಕಣ್ಣಲ್ಲಿ ಆನಂದ ಭಾಷ್ಪ ಧಾರೆ ಇಡುತ್ತದೆ. ಅದನ್ನು ಕಂಡ ದಂಪತಿಗಳ ಕಣ್ಣಲ್ಲೂ ಆನಂದಭಾಷ್ಪಗಳು ತೇಲಾಡುತ್ತವೆ. ಹೊಟ್ಟೆ ಬರಿಯುವಂತ ಪಂಚ ಪಕ್ವಾನ್ನ ಉಂಡರೂ ಆಗದಿದ್ದ ಸಂತೋಷ ಈಗ ಅವರಿಗೆ ಆಗಿದೆ. ಇದನ್ನೇ ಆನಂದ ಕರ್ಮವೆಂದು ಕರೆಯುತ್ತಾರೆ

ಅದೊಂದು ಮನೆ, ಆ ಮೆನೆಯಲ್ಲಿ ಒಬ್ಬ ತಾಯಿ, ಆ ತಾಯಿಗೆ ಶಾಲೆಗೆ ಹೋಗುವ ಒಬ್ಬ ಮಗು. ಅದು ಹಬ್ಬದ ದಿನವಾದ್ದರಿಂದ ಮನೆಯಲ್ಲಿ ವಿಪರೀತ ಕೆಲಸ ಕಾರ್ಯ. ಅದಕ್ಕೆ ತಾಯಿಯು ಮಗನಿಗೆ ಶಾಲೆಗೆ ಹೋಗುವ ಮೊದಲು ಒಂದಿಷ್ಟು ಮನೆಗೆಲಸ ಮಾಡಲು ಹೇಳಿದರು. ಒಲ್ಲದ ಮನಸ್ಸಿನಿಂದಲೇ ಮಗನು ಮನೆಗೆಲಸ ಮಾಡಲು ಹೇಳಿದಳು. ಒಲ್ಲದ ಮನಸ್ಸಿನಿಂದಲೇ ಮಗನು ನೀರು ತರುವುದು. ಕಟ್ಟಿಗೆ ಒಡೆಯುವುದು, ಕಸ ಗೂಡಿಸುವುದು, ಪಾತ್ರೆ ತೊಳೆಯುವುದು ಹೀಗೆ ನಾಲ್ಕು ಕೆಲಸ ಮಾಡಿದನು. ಒಂದು ಕೆಲಸಕ್ಕೆ ಹತ್ತು ರೂಪಾಯಿಯಂತೆ ನಾಲ್ವತ್ತು ರೂಪಾಯಿ ಬಿಲ್ಲು ಮಾಡಿದನು. ಆ ಚೀಟಿಯನ್ನು ತಾಯಿಯ ಮಂಚದ ಬಳಿ ಇಟ್ಟು ಶಾಲೆಗೆ ಹೋದ.



ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಮಗನು ಬರೆದ ಇಟ್ಟಿದ್ದ ಚೀಟಿಯನ್ನು ತಾಯಿ ನೋಡಿದಳು. ಮುದ್ದು ಮಗುವಿಗೆ ಪಾಠ ಕಳಿಸುವುದಕ್ಕೆಂದು ತಾಯಿಯು ಒಂದು ಚೀಟಿಯನ್ನು ಬರೆದಳು. ನೀನು ಪುಟ್ಟ ಮಗುವಾಗಿದ್ದಾಗಿನಿಂದ ಇಲ್ಲಿಯವರೆಗೆ ನಿನಗೆ ಉಣಿಸಿದೆ, ಉಡಿಸಿದೆ, ಇತ್ತಿ ಆಡಿಸಿದೆ. ಮೈತೊಳೆದೆ ಕಾಯಿಲೆ ಆದಾಗ ಔಷಧೋಪಚಾರ ಮಾಡಿಸಿದೆ. ಅದಕ್ಕೆಲ್ಲಕ್ಕೂ ಬಿಲ್ಲು ಏನು ಇಲ್ಲ. ನಿನ್ನ ಮುಗುಳು ನಗೆ ಒಂದೇ ಸಾಕು!! ಶಾಲೆಯಿಂದ ಬಂದ ಬಾಲಕ ತಾಯಿ ಬರೆದಿಟ್ಟ ಚೀಟಿಯನ್ನು ನೋಡಿ ಓಡುತ್ತ ಬಂದು ಅಮ್ಮನ ಕಾಲಿಗೆ ಬಿದ್ದು "ಆಮ್ಮಾ, ನನ್ನದು ತಪ್ಪಾಯಿತು ಕ್ಷಮಿಸು" ಎಂದು ಕೇಳಿದ. ಆಗ ತಾಯಿ ಮಗನನ್ನು ಎತ್ತಿಕೊಂಡಿ ಮುದ್ದಾಡಿದಳು. ಈಗ ಈರ್ವರ ಮುಖದಲ್ಲಿ ನಗೆ ಹೂವು ಅರಳಿತ್ತು. ಇಲ್ಲಿ ತಾಯಿ ಮಾಡಿದ ಕರ್ಮವು ಆದಾಯದ್ದಲ್ಲ. ಆನಂದದ ಕರ್ಮ!! ಹೃದಯಕರ್ಮ!!

ಪುರಷರಿಗಾದರೆ ವಾರಕ್ಕೊಂದು ತಿಂಗಳಿಗೊಂದು ಎಂದು ಹಲವಾರು ರಜೆಗಳಿರುತ್ತದೆ. ಆದರೆ ಮನೆಯಲ್ಲಿ ದುಡಿಯುವ ತಾಯಂದಿರರಿಗೆ ಒಂದೇ ಒಂದು ದಿನ ರಜೆಯಿಲ್ಲ. ವರ್ಷವಿಡೀ ದುಡಿಯುತ್ತಾರೆ. ನಿತ್ಯ ನಿರಂತರ ಮನೆಯನ್ನು ಶೃಂಗರಿಸಿ, ಮನೆಯಲ್ಲಿ ಸಂತಸವನ್ನು ತುಂಬುತ್ತಾರೆ. ಮನೆತನದ ಗೌರವವನ್ನು ಕಾಪಾಡುತ್ತಾರೆ ಕುಟುಂಬಕ್ಕೆ ವೈಭವ ತರುತ್ತಾರೆ. ಒಂದೇ ಒಂದು ತಕರಾರನ್ನು ಹೇಳದೇ ಮನೆಗಾಗಿ, ಮನೆಯವರಿಗಾಗಿ, ಮಕ್ಕಳಿಗಾಗಿ ಆಯುಷ್ಯದ ತುಂಬ ನಿಸ್ವಾರ್ಥದಿಂದ ದುಡಿಯುವ ತಾಯಂದಿರು ದೇವರಿಗೆ ಸಮಾನರು; ಅನುಮಪ ತ್ಯಾಗಯೋಗಿಗಳು.

ಪುರುಷರು ಗಳಿಸುವ ಕೋಟಿ ಕೋಟಿ ಸಂಪತ್ತು ಕೂಡಾ ಆ ತ್ಯಾಗಮಯಿ ಮಾತೆಯರ ಒಂದು ಮುಳುಗು ನಗೆಗೆ ಸರಿಬರಲಾರದು! ಹೆತ್ತು, ಹೊತ್ತು, ಬೆಳೆಸಿದ ತಾಯಿ–ತಂದೆ, ಬಂಧು–ಬಳಗವನ್ನೆಲ್ಲ ಬಿಟ್ಟು ಎಂದೆಂದೂ ಅರಿಯದ ಪತಿಯ ಮನೆಯ ಸೇವೆಗೆ ಬಂದು ನಿಲ್ಲುವ ಆ ಮಾತೆಯರ ತ್ಯಾಗವು ಅವರ್ಣನೀಯವಾದುದು! ಅವರ ಸೇವಾಕಾರ್ಯ ಅಥವಾ ನಿತ್ಯ ಕರ್ಮವೂ ಆನಂದಕರ್ಮ!!

ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್)

ಕ್ರ.ಸಂ	ವಿವರ	ಬೆಳಗಾವಿ	ಕಲಬುರಗಿ	ಬೆಂಗಳೂರು	ಮೈಸೂರು	ಒಟ್ಟು
1	ಅಕ್ಟೋಬರ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ	1176	1110	713	416	3415
2	ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ	213	86	140	80	519
3	ಇತ್ಯರ್ಥಗೊಂಡ ದಾವಾ ಪ್ರಕರಣಗಳು	0	23	0	4	27
4	ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು	1389	1173	853	492	3907
ಅಕ್ಟೋಬರ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 519 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 27						
ಅಮಲ್ದಾರಿ ವಿಭಾಗ						
1	ದಾಖಲಾದ ಅಮಲ್ದಾರಿ ಪ್ರಕರಣಗಳ ಸಂಖ್ಯೆ	7707	1504	2373	842	12426
2	ಇತ್ಯರ್ಥಗೊಂಡ ಅಮಲ್ದಾರಿ ಪ್ರಕರಣಗಳು	1442	293	638	223	2596
3	ವಿಚಾರಣೆ ಹಂತದಲ್ಲಿರುವ ಅಮಲ್ದಾರಿ ಪ್ರಕರಣಗಳು	6265	1211	1735	619	9830
ಅಕ್ಟೋಬರ್ 2026ರ ತಿಂಗಳಿನಲ್ಲಿ ಒಟ್ಟು 45 ಅಮಲ್ದಾರಿ ಪ್ರಕರಣಗಳು ದಾಖಲಾಗಿರುತ್ತವೆ.						

ವಿಷಯ ತಜ್ಞರ ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಭೆ



ಉದ್ಘಾಟನೆ



ಗಣ್ಯರೊಂದಿಗೆ ಸಂಪನ್ಮೂಲ ವ್ಯಕ್ತಿಗಳು

ಅಧ್ಯಕ್ಷೀಯ ನುಡಿ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಡೆಸುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳ ಸಮಾಲೋಚನಾ ಸಭೆಯನ್ನು ದಿನಾಂಕ : 15.10.2026 ರಂದು ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ವಹಿಸಿದ್ದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರಾದ ಜಿ. ನಂಜನಗೌಡರವರು ಸಂಪನ್ಮೂಲ ವ್ಯಕ್ತಿಗಳು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಜೀವಾಳ, ತಾವುಗಳು ನೀಡುವ ಅಧ್ಯಯನ ಸಾಹಿತ್ಯ, ಉಪನ್ಯಾಸಗಳು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡುತ್ತಿದೆ. ತಮ್ಮೆಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ತಾವೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮದೇ ವೈಶಿಷ್ಟತೆಯನ್ನು ರೂಢಿಸಿಕೊಂಡವರು ಜ್ಞಾನದ ಭಂಡಾರವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂಯುಕ್ತ ಸಹಕಾರಿಯ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಪ್ರಾಸ್ತವಿಕವಾಗಿ ನುಡಿ : ಪ್ರಾಸ್ತವಿಕವಾಗಿ ನುಡಿಯನ್ನು ಮಾತಾನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಪ್ರತಿವರ್ಷ ಸಂಯುಕ್ತ ಸಹಕಾರಿ ವತಿಯಿಂದ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ, ಪ್ರಾಂತಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಈ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬ್ಯಾಂಕಿಂಗ್ ಕ್ಷೇತ್ರದ ತಜ್ಞರು, ಸಹಕಾರ ಇಲಾಖೆಯ ಅಧಿಕಾರಿಯವರು, ಸಹಕಾರಿ ತಜ್ಞರು, ಕಾರ್ಪೋರೆಟ್ ತರಬೇತುದಾರರು, ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು, ವಿಷಯ ತಜ್ಞರು ಸೌಹಾರ್ದ ಸಹಕಾರಿ ಕ್ಷೇತ್ರದ ಮತ್ತು ಸಂಯುಕ್ತ ಸಹಕಾರಿಯ Brand ambassador ಆಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಈ ತರಬೇತಿಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುವಂತಾಗಲು ಎಲ್ಲರ ಅಭಿಪ್ರಾಯ ಮತ್ತು ಮಾರ್ಗದರ್ಶನ ಪಡೆಯುವ ಅವಶ್ಯಕತೆ ಹಿನ್ನಲೆಯಲ್ಲಿ ಸಭೆಯನ್ನು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳ ಸಭೆಯಲ್ಲಿ ಗಣ್ಯರ ಸಲಹೆಗಳು

1. ಶ್ರೀ ರತ್ನಾಕರ ಹೆಗಡೆ

* ತರಬೇತಿಯು ವೆಚ್ಚವಲ್ಲ–ಅದೊಂದು ಹೂಡಿಕೆ. ಸಿಬ್ಬಂದಿಗೆ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಲು ಅಗತ್ಯವಾದ ತರಬೇತಿಯನ್ನು ನೀಡಬೇಕು.

2. ಶ್ರೀ ವಿರೇಶ್ ಹಿರೇಮಠ

* ಸಿಬ್ಬಂದಿಯ ವೃತ್ತಿಪರ ಅಭಿವೃದ್ಧಿ ಮತ್ತು ವೈಯಕ್ತಿಕ ಬೆಳವಣಿಗೆಗೆ ಮಾರ್ಗದರ್ಶನ ನೀಡುವುದು.

3. ಶ್ರೀ ಅಮೃತ್ ಜೋಶಿ

* ತರಬೇತಿಯಲ್ಲಿ ಭಾಗವಹಿಸುವವರಿಗೆ ಅಗತ್ಯವಾದ ತರಬೇತಿ ಅಧ್ಯಯನ ಸಾಹಿತ್ಯ ಒದಗಿಸಬೇಕು.
* ನಾಯಕತ್ವದ ಗುಣಗಳನ್ನು ಬೆಳೆಸುವುದು ಹಾಗೂ ಕೆಲಸ ಮತ್ತು ವೈಯಕ್ತಿಕ ಜೀವನದ ನಡುವೆ ಸಮತೋಲನ ಕಾಯ್ದುಕೊಳ್ಳುವ ವಿಷಯಗಳ ಕುರಿತು ತರಬೇತಿ ನೀಡಬೇಕು.

4. ಶ್ರೀ ಅನಿಲ್ ಭಾರದ್ವಾಜ್

* ಯುವಜನರಿಗೆ ಸೌಹಾರ್ದ ಸಹಕಾರ ಕ್ಷೇತ್ರದ ಹುಟ್ಟು, ಬೆಳವಣಿಗೆ ಹಾಗೂ ಅವಕಾಶಗಳ ಕುರಿತು ಸಮರ್ಪಕ ಮಾಹಿತಿ ನೀಡಬೇಕು.
* ಯುವಜನರಿಗೆ ನಿರಂತರ ಮಾರ್ಗದರ್ಶನ ನೀಡುವ ಮೂಲಕ ಸಹಕಾರ ಕ್ಷೇತ್ರದತ್ತ ಅವರನ್ನು ಆಕರ್ಷಿಸಬೇಕು.
* ಸೌಹಾರ್ದ ಸಹಕಾರ ಕ್ಷೇತ್ರದ ಕುರಿತು ವಿವಿಧ ವಿಷಯಗಳ ಮಾಹಿತಿಯನ್ನು ಒದಗಿಸಲು ಸಹಾಯವಾಣಿ (Helpline) ಆನಲೈನ ಮೂಲಕ ವ್ಯವಸ್ಥೆಯನ್ನು ರೂಪಿಸಬೇಕು.
* ಪ್ರತಿ 15 ದಿನಗಳಿಗೊಮ್ಮೆ ಒಂದು ಗಂಟೆಯ ಅವಧಿಯಲ್ಲಿ ವಿವಿಧ ವಿಷಯಗಳ ಕುರಿತು ಮಾಹಿತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು.

5. ಶ್ರೀ ವರುಣ್ ಭಟ್

* ಸಂಯುಕ್ತ ಸಹಕಾರಿಯ ತರಬೇತಿ ಅಥವಾ ಸಭೆಯಲ್ಲಿ ಭಾಗವಹಿಸಿದ ನಂತರ, ಭಾಗವಹಿಸಿದವರಿಂದ ತರಬೇತಿಯ ಕುರಿತು ಅಭಿಪ್ರಾಯ

ಮತ್ತು ಪ್ರತಿಕ್ರಿಯೆಗಳನ್ನು (Feedback) ಪಡೆಯಬೇಕು.

* ಸೌಹಾರ್ದ ಸಹಕಾರಿಗಳ ಸಿಬ್ಬಂದಿ ಮತ್ತು ನಿರ್ದೇಶಕರಿಗೆ ಪ್ರತ್ಯೇಕವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ಒಂದು ತರಬೇತಿ ಅವಧಿಯನ್ನು 90 ನಿಮಿಷಗಳಿಗೆ ಸೀಮಿತಗೊಳಿಸುವ ಕುರಿತು ಪರಿಶೀಲಿಸಬೇಕು.
* ಪ್ರಸ್ತುತ ಅಗತ್ಯಗಳಿಗೆ ಅನುಗುಣವಾಗಿ ಹೊಸ ಹೊಸ ವಿಷಯಗಳನ್ನು ಒಳಗೊಂಡ ತರಬೇತಿ ಕಾರ್ಯಕ್ರಮ ಗಳನ್ನು ಆಯೋಜಿಸಬೇಕು.

6. ಶ್ರೀ ಬಿ.ವಿ. ರವೀಂದ್ರನಾಥ್

* ಸಂಯುಕ್ತ ಸಹಕಾರಿಯಿಂದ ಕಳೆದ 20 ವರ್ಷಗಳಲ್ಲಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳನ್ನು ಸಮಗ್ರವಾಗಿ ರಿವಿವ್ ಮಾಡಬೇಕು.
* ಹೆಚ್ಚು ಪರಿಣಾಮಕಾರಿಯಾದ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.
* ಲೆಕ್ಕಪರಿಶೋಧಕರಿಗೆ ವಿಷಯ ತಜ್ಞರಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ತರಬೇತುದಾರರನ್ನು ಅವರ ಅನುಭವ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಬೇಸಿಕ್ ಟ್ರೈನರ್, ಅಡ್ವಾನ್ಸ್‌ಡ್ ಟ್ರೈನರ್ ಹಾಗೂ ಮಾಸ್ಟರ್ ಟ್ರೈನರ್ ಎಂದು ವರ್ಗೀಕರಿಸಬೇಕು.
* ಸ್ಥಳೀಯ ಮಟ್ಟದಲ್ಲಿ ಪ್ರಕರಣ ಅಧ್ಯಯನಗಳನ್ನು (Case Studies) ನಡೆಸಬೇಕು.
* ಜಿಎಸ್‌ಟಿ ಲೆಕ್ಕಪರಿಶೋಧನೆ (GST, Audit) ಹಾಗೂ ಸಾಲ ಪ್ರಕರಣಗಳ ವಿಶ್ಲೇಷಣೆಗೆ ಸಂಬಂಧಿಸಿದ ತರಬೇತಿಯನ್ನು ನೀಡಬೇಕು.
* ಪ್ರಸ್ತುತವಿರುವ ಅಧ್ಯಯನ ಸಾಹಿತ್ಯವನ್ನು ಪರಿಷ್ಕರಿಸಿ, ನವೀಕರಿಸಿದ ಮಾಹಿತಿಯನ್ನು ಒದಗಿಸಬೇಕು.
* ವಿಷಯ ತಜ್ಞರು ತರಬೇತಿಯಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.
* ಕೃತಕ ಬುದ್ಧಿಮತ್ತೆ (AI) ಬಳಕೆಯ ಕುರಿತು ಉಪಯುಕ್ತ ಹಾಗೂ ವಿನೂತನ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವರದಿಗಳನ್ನು ನಿಯಮಿತವಾಗಿ ಸಿದ್ಧಪಡಿಸಬೇಕು.
* ತರಬೇತುದಾರರಿಗೆ ತರಬೇತಿ ವಿಷಯವಾರು ಕಾರ್ಯಕ್ರಮಗಳನ್ನು ಆಯೋಜಿಸುವ ವಿಧಾನಗಳ ಕುರಿತು ಮಾರ್ಗದರ್ಶನ ನೀಡಬೇಕು.
* ವಿಷಯ ತಜ್ಞರಿಂದ ವಿಷಯವಾರು ತರಬೇತಿಯನ್ನು ಆಯೋಜಿಸಬೇಕು.

7. ಶ್ರೀ ಭಾಸ್ಕರ ಹೆಗಡೆ ಕಾಗೇರಿ

* ತರಬೇತಿ ಕಾರ್ಯಕ್ರಮಗಳಲ್ಲಿ ವೈಜ್ಞಾನಿಕ ಮತ್ತು ಆಧುನಿಕ ತರಬೇತಿ ಸಾಧನಗಳನ್ನು ಬಳಸಬೇಕು.
* ಸಂಯುಕ್ತ ಸಹಕಾರಿಯ ಸಿಬ್ಬಂದಿಗಳನ್ನು 2ನೇ ಹಂತದಲ್ಲಿ ಸಮರ್ಥ ತರಬೇತುದಾರರನ್ನಾಗಿ ರೂಪಿಸಲು ಅಗತ್ಯವಾದ ಮೂಲಭೂತ ತರಬೇತಿ ನೀಡಬೇಕು.
* ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ತಂತ್ರಜ್ಞಾನ ಬಳಕೆಯ ಕುರಿತು ಸೂಕ್ತ ತರಬೇತಿ ನೀಡಬೇಕು.
* ಸಹಕಾರಿಗಳ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ಪ್ರತ್ಯೇಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನ್ನು ವಿಷಯ, ವರದಿಗಳನ್ನು ಕಾಲಕಾಲಕ್ಕೆ ನವೀಕರಿಸಬೇಕು.
* ತರಬೇತಿ ಕಾರ್ಯಕ್ರಮಗಳು ದೀರ್ಘಾವಧಿಕ್ಕಿಂತ ಸಾಂಸ್ಥಿಕ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಗೆ ಸಹಕಾರಿಯಾಗುವಂತಿರಬೇಕು.
* ತರಬೇತಿ ಅವಧಿಯಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಬೇಕು.

8. ಶ್ರೀ ಎ.ಆರ್. ಶ್ರೀನಾಥ್

* ತರಬೇತಿ ಕಾರ್ಯಕ್ರಮಗಳ ಪರಿಣಾಮವನ್ನು (Training Impact) ಮೌಲ್ಯಮಾಪನ ಮಾಡಬೇಕು.
* ಶಾಲಾ–ಕಾಲೇಜುಗಳ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಸಹಕಾರ ಕ್ಷೇತ್ರದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

9. ಶ್ರೀ ಜಗದೀಶ್ ರಾಮ್

* ಸಹಕಾರಿಗಳಲ್ಲಿ ಕಾರ್ಯವಿಧಾನಗಳು ಮತ್ತು ಮಾನದಂಡಗಳ ಕುರಿತು ಅರಿವು ಹೆಚ್ಚಿಸುವ ಅಗತ್ಯವಿದೆ.
* ನಷ್ಟದಲ್ಲಿರುವ ಸಹಕಾರಿಗಳಲ್ಲಿ ವ್ಯವಸ್ಥಿತ ಕಾರ್ಯವಿಧಾನಗಳ ಕೊರತೆಯನ್ನು ಗುರುತಿಸಿ, ಅವುಗಳನ್ನು ಸುಧಾರಿಸಲು ಪೊಲೈಟ್ ಪ್ರಾಜೆಕ್ಟ್ ಮೂಲಕ ತರಬೇತಿ ನೀಡಬೇಕು.
* ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುವ ವಿನೂತನ ವಿಧಾನಗಳ ಕುರಿತು ಮಾಹಿತಿ ನೀಡಬೇಕು.
* ತರಬೇತಿ ಪಡೆದ ನಂತರ ಕಲಿತ ವಿಷಯಗಳನ್ನು ಕಾರ್ಯರೂಪಕ್ಕೆ ತಂದಿರುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕು.
* ಸಾಫ್ಟ್‌ವೇರ್ ಬಳಕೆ ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು.
* ಚಿನ್ನ ಆಭರಣ ಸಾಲ ನೀಡುವ ಸೌಹಾರ್ದ ಸಹಕಾರಿಗಳಿಗೆ ದಾಖಲೆಗಳ ಪ್ರಕ್ರಿಯೆಗಳ ಸೂಕ್ತ ಮಾರ್ಗದರ್ಶನ ನೀಡಬೇಕು.

10. ಡಾ. ಕೃಷ್ಣ

* ತರಬೇತಿ ಪಡೆದ ಪ್ರತಿನಿಧಿಗಳಿಂದ ತರಬೇತಿ ಕಾರ್ಯಕ್ರಮಗಳ ಕುರಿತು ಫಿಡಬ್ಯಾಕ್ ವರದಿಯನ್ನು ಪಡೆಯ ಬೇಕು.
* ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸೂಕ್ತ

ಪಠ್ಯಕ್ರಮವನ್ನು ರೂಪಿಸುವ ಕುರಿತು ಪರಿಶೀಲಿಸಬೇಕು.

11. ಶ್ರೀಮತಿ ಸಾವಿತ್ರಿ ಮಸ್ಕಿ

* ಸಿಬ್ಬಂದಿಯ ಸಾಮರ್ಥ್ಯ ವೃದ್ಧಿಗಾಗಿ ಉದ್ಯೋಗಿ ಅಭಿವೃದ್ಧಿ ತರಬೇತಿಯನ್ನು (Employee Development Training) ಆಯೋಜಿಸಬೇಕು.
* ನಿರ್ದೇಶಕರ ಸಾಮರ್ಥ್ಯ ವೃದ್ಧಿಗಾಗಿ ನಿರ್ದೇಶಕರ ಅಭಿವೃದ್ಧಿ ತರಬೇತಿಯನ್ನು (Directors' Development Training) ಆಯೋಜಿಸಬೇಕು.
* ಸಿಬ್ಬಂದಿಗೆ ಅಡ್ವಾನ್ಸ್‌ಡ್ ಎಕ್ಸೆಲ್ Chagpt, Gemini (Advanced Excel) ತರಬೇತಿ ನೀಡಬೇಕು.
* ಸಹಕಾರ ಕ್ಷೇತ್ರದಲ್ಲಿನ ಆರ್ಥಿಕ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರೋಪಾಯಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ಪ್ರಸ್ತುತ ನೀಡಲಾಗುತ್ತಿರುವ 5, 7 ಮತ್ತು 10 ದಿನಗಳ ತರಬೇತಿ ಕಾರ್ಯಕ್ರಮಗಳಿಗೆ ಸೂಕ್ತವಾದ ಹೊಸ ಹೆಸರುಗಳನ್ನು ನಿಗದಿಪಡಿಸಬೇಕು.

12. ಶ್ರೀ ಜಿ.ಕೆ. ರಾಮಪ್ಪ

* ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಗಳಿಗೆ ಭೇಟಿ ನೀಡಿ, ಅವುಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಬೇಕು.
* ಸಿಬ್ಬಂದಿ ನೇಮಕಾತಿ, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಬೇಕು.

13. ಶ್ರೀ ಪ್ರಕಾಶ್ ಆರ್.ಎಸ್.

* ಕೃತಕ ಬುದ್ಧಿಮತ್ತೆ (AI), ಸೈಬರ್ ಭದ್ರತೆ, ಡಿಜಿಟಲ್ ದಾಖಲೆಗಳ ನಿರ್ವಹಣೆ ಮತ್ತು ಡಿಜಿಟಲೀಕರಣದ ಕುರಿತು ಹೆಚ್ಚಿನ ತರಬೇತಿ ನೀಡಬೇಕು.

14. ಶ್ರೀ ಮಧುಕರ ಹೆಗಡೆ,

* ನಷ್ಟದಲ್ಲಿರುವ ಸಹಕಾರಿಗಳ ಮೌಲ್ಯಮಾಪನವನ್ನು ಸಮಗ್ರವಾಗಿ ನಡೆಸಬೇಕು.
* ನಷ್ಟದಲ್ಲಿರುವ ಸಹಕಾರಿಗಳಿಗೆ ಪ್ರತ್ಯೇಕವಾಗಿ ಭೇಟಿ ನೀಡಿ, ಅವುಗಳ ಸಮಸ್ಯೆಗಳನ್ನು ಗುರುತಿಸಬೇಕು.
* ಸಮಸ್ಯೆಗಳ ಸ್ವರೂಪಕ್ಕೆ ಅನುಗುಣವಾಗಿ ಸಿಬ್ಬಂದಿ ಮತ್ತು ಆಡಳಿತ ಮಂಡಳಿಯ ಸದಸ್ಯರಿಗೆ ಪ್ರತ್ಯೇಕ ತರಬೇತಿ ನೀಡಬೇಕು.
* ಸಂಪನ್ಮೂಲ ವ್ಯಕ್ತಿಗಳಿಗಾಗಿ ಎರಡು ದಿನಗಳ ತರಬೇತಿ ವಸತಿ ಸಹಿತವಾಗಿ ಕಾರ್ಯಕ್ರಮವನ್ನು ಆಯೋಜಿಸಬೇಕೆಂದು ತಿಳಿಸಿದರು.

15. ಶ್ರೀ ಬಿ.ಎಸ್. ಚಂದ್ರಶೇಖರ್

* ತರಬೇತಿಯ ಗುಣಮಟ್ಟ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

16. ಶ್ರೀಮತಿ ಸೌಮ್ಯ ಆರ್, ಆರ್.ಐ.ಸಿ.ಎಂ ಅಧಿಕಾರಿ

* ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮಗ್ರ ಪಠ್ಯಕ್ರಮವನ್ನು ರೂಪಿಸಬೇಕು.
* ಶಾಲಾ–ಕಾಲೇಜುಗಳ ಪಠ್ಯಕ್ರಮದಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಕನಿಷ್ಠ ಒಂದು ಪಾಠವನ್ನು ಅಳವಡಿಸುವ ಕುರಿತು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಬೇಕು.
* ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಕುರಿತು ಅರಿವು ಮೂಡಿಸಲು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

17. ಶ್ರೀ ಲಿಯಾಕತ್ ಅಲಿ

* ಕೆವೈಎಮ್ (KYM — Know Your Member) ಪ್ರಕ್ರಿಯೆಯ ಕುರಿತು ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಬೇಕು.
* ನಷ್ಟದಲ್ಲಿರುವ ಸಹಕಾರಿಗಳ ಕುರಿತು ಸಂಶೋಧನೆ ನಡೆಸಿ, ಅವುಗಳ ಸಮಸ್ಯೆಗಳನ್ನು ಗುರುತಿಸಬೇಕು.
* ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಅಗತ್ಯವಾದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

18. ಡಾ. ನಂದೀಶ್ ಹಿರೇಮಠ

* ವಾರಾಂತ್ಯದಲ್ಲಿ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ತರಬೇತಿಯ ಅವಧಿಯನ್ನು ಸೂಕ್ತವಾಗಿ ನಿರ್ಧರಿಸಿ, ನಿರಂತರವಾಗಿ ದೀರ್ಘಾವಧಿಯ ತರಬೇತಿ ನೀಡುವುದರಿಂದ ಉಂಟಾಗಬಹುದಾದ ಸಮಸ್ಯೆಗಳನ್ನು ತಪ್ಪಿಸಬೇಕು.
* ರಾಜ್ಯದ 25 ಅತ್ಯುತ್ತಮ ಸಹಕಾರಿಗಳನ್ನು ಆಯ್ಕೆ ಮಾಡಿ, ಅವುಗಳ ಕಾರ್ಯವೈಖರಿಯ ಕುರಿತು ಅಧ್ಯಯನಗಳನ್ನು (Case Studies) ನಡೆಸಬೇಕು.
* ಪ್ರಕರಣ ಅಧ್ಯಯನಗಳ ಆಧಾರದ ಮೇಲೆ ಸಮಗ್ರ ವರದಿಯನ್ನು ಸಿದ್ಧಪಡಿಸಿ, ಇತರ ಸಹಕಾರಿಗಳಿಗೆ ಮಾದರಿಯಾಗಿ ಬಳಸಿಕೊಳ್ಳಬೇಕು.

19. ಶ್ರೀ ಮೋಹಿತ್ ಮಸ್ಕಿ

* ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಹೆಚ್ಚಿಸಲು ವಿನೂತನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.
* ಸಹಕಾರ ಕ್ಷೇತ್ರದ ಪ್ರಸ್ತುತ ಅಗತ್ಯಗಳಿಗೆ ಅನುಗುಣವಾಗಿ ತರಬೇತಿ ವಿಷಯಗಳನ್ನು ರೂಪಿಸಬೇಕು.

ಸಮಾರೋಪ ಕಾರ್ಯಕ್ರಮ

ಸಭೆಯ ಕೊನೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ರವರು ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯಕ್ಕೆ ಸ್ಪಂದಿಸುತ್ತಾ ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಸೂಕ್ತ ಸಲಹೆಗಳಿಗೆ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಹೆಚ್ಚಿಸಲು ಪ್ರಯೋಜನವಾಗಿವೆ /ಸಹಕಾರಿಯಾಗಿವೆ. ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಸಂಯುಕ್ತ ಸಹಕಾರಿಯ ಕರೆಗೆ ಒಗೊಟ್ಟು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಕಾರಣಿಭೂತರಾಗಿದ್ದಿರಿ ನಿಮ್ಮೆಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ ಎಂದು ತಿಳಿಸಿದರು.

73ನೇ ಸಹಕಾರ ಸಪ್ತಾಹ ರಾಜ್ಯ ಮಟ್ಟದ ಆಚರಣೆ ವಿವರ

ಧ್ಯೇಯ : ಸಹಕಾರ ಸಂಸ್ಥೆಗಳ ಬೆಳವಣಿಗೆಯಲ್ಲಿ ಉತ್ತಮ ಪರಿಸರ, ತಂತ್ರಜ್ಞಾನ, ಕೌಶಲ್ಯಾಧಾರಿತ, ವೃತ್ತಿಪರ ಸೇವೆ

ದಿನಾಂಕ	ಸಹಕಾರ ಸಪ್ತಾಹದ ದಿನದ ಶೀರ್ಷಿಕೆ	ಸ್ಥಳ
14.11.2026 ಶನಿವಾರ	ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ	ಬೆಂಗಳೂರು
15.11.2026 ಭಾನುವಾರ	ಗಣಕೀಕರಣ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲೈಜೇಷನ್ ಪ್ರಕ್ರಿಯೆಗಳು ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಪೂರಕ	ಹಾವೇರಿ
16.11.2026 ಸೋಮವಾರ	ಸಹಕಾರ ಶಿಕ್ಷಣ–ತರಬೇತಿ–ಪ್ರಚಾರ ಮೂಲಕ ಸಹಕಾರ ಸಂಸ್ಥೆಗಳಲ್ಲಿ ಪರಿಣಾಮಕಾರಿ ಬದಲಾವಣೆ	ದಾವಣಗೆರೆ / ಶಿವಮೊಗ್ಗ
17.11.2026 ಮಂಗಳವಾರ	ಸಹಕಾರ ಸಂಸ್ಥೆಗಳ ಮೂಲಕ ಮೌಲ್ಯವರ್ಧನೆ – ಬ್ರ್ಯಾಂಡ್ ನಿರ್ಮಾಣ	ತುಮಕೂರು
18.11.2026 ಬುಧವಾರ	ಸಾರ್ವಜನಿಕ/ಖಾಸಗಿ – ಸಹಕಾರಿ ಪಾಲುದಾರಿಕೆ ಬಲಪಡಿಸುವ ದಿನ	ಬೀದರ
19.11.2026 ಗುರುವಾರ	ಮಹಿಳೆಯರು, ಯುವಜನರು ಮತ್ತು ಸಮಾಜದ ಅಬಲ ವರ್ಗಗಳು ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ	ಯಾದಗಿರಿ
20.11.2026 ಶುಕ್ರವಾರ	ಪರಿಸರ ಸಂರಕ್ಷಣೆ, ಲಿಂಗ ಸಮಾನತೆ ಮತ್ತು ವಿಶ್ವ ಶಾಂತಿಗಾಗಿ ಸಹಕಾರ ಸಂಸ್ಥೆಗಳು	ಮಂಗಳೂರು

ಕ್ರೆಡಿಟ್ ಲೈಫ್ ಇನ್ಶೂರೆನ್ಸ್

ಸಂಪೂರ್ಣ ಸಾಲ ರಕ್ಷಣಾ ಯೋಜನೆ (ಯಾವುದೇ ರೀತಿಯ ಮರಣಕ್ಕೆ ವಿಮಾ ರಕ್ಷಣೆ)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ (KSSFCL) ಸಂಸ್ಥೆಯು ಸಾಮಾನ್ಯ ವಿಮೆ ಮತ್ತು ಜೀವ ವಿಮೆಗೆ ಸಂಬಂಧಿಸಿದಂತೆ ಸುತ್ತೋಲೆ ಸಂಖ್ಯೆ Karasoussamsa/avi/012/2023-24 ರ ಅಡಿಯಲ್ಲಿ M/s Corporate Risks India Insurance Brokers Pvt. Ltd. (CRI) ಸಂಸ್ಥೆಯನ್ನು ನಾಮನಿರ್ದೇಶನ ಮಾಡಿದೆ.

M/s Corporate Risks India Insurance Brokers Pvt. Ltd. (CRI) ಸಂಸ್ಥೆಯು ನುರಿತ ಹಾಗೂ ಹೆಚ್ಚಿನ ಅನುಭವ ಹೊಂದಿರುವ ಪ್ರತಿಷ್ಠಿತ ಕಂಪನಿಯಾಗಿದ್ದು, IRDA ಪರವಾನಗಿ ಸಂಖ್ಯೆ CB 082/03 (135) ಹೊಂದಿದೆ.

ಈ ಸಂಸ್ಥೆಯು ಭಾರತದಾದ್ಯಂತ ಉತ್ತಮ ಹೆಸರನ್ನು ಹೊಂದಿದ್ದು, ವಿಶೇಷವಾಗಿ ಸಹಕಾರಿ ಕ್ಷೇತ್ರ ಮತ್ತು ಬ್ಯಾಂಕಿಂಗ್ ವಲಯಗಳ ಅಗತ್ಯಗಳಿಗೆ ಅನುಗುಣವಾಗಿ ವಿಮಾ ಯೋಜನೆಗಳನ್ನು ರೂಪಿಸುವಲ್ಲಿ ಪರಿಣತಿ ಹೊಂದಿದೆ.

ಇವರು ಮೈಕ್ರೋ ಫೈನಾನ್ಸ್ ಮತ್ತು ಕಾರ್ಪೊರೇಟ್ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನ ಹೊಂದಿರುವ M/s CreditAccess Life Insurance ಸಂಸ್ಥೆಯೊಂದಿಗೆ ಸಹಭಾಗಿತ್ವ ಹೊಂದಿದ್ದಾರೆ.

ನಾಮನಿರ್ದೇಶನದ ನಂತರದ ಸಾಧನೆಗಳು

ಈ ಯೋಜನೆಯ ಮೂಲಕ ಇದುವರೆಗೆ ಸಾಧಿಸಿರುವ ಪ್ರಮುಖ ಫಲಿತಾಂಶಗಳು:

- 35,000ಕ್ಕೂ ಹೆಚ್ಚು ಸದಸ್ಯರಿಗೆ ಜೀವ ವಿಮಾ ರಕ್ಷಣೆ ಒದಗಿಸಲಾಗಿದೆ. • ಒಟ್ಟು ವಿಮಾ ಮೊತ್ತ (ಸಾಲದ ಮೌಲ್ಯ) ಸುಮಾರು ₹300 ಕೋಟಿ.
- 100ಕ್ಕೂ ಹೆಚ್ಚು ಸೊಸೈಟಿಗಳಲ್ಲಿ ವಿಮಾ ಸೌಲಭ್ಯ ಕಲ್ಪಿಸಲಾಗಿದೆ. • 100% ಕ್ಲೈಮ್ ಸೆಟಲ್‌ಮೆಂಟ್ ಸಾಧಿಸಲಾಗಿದೆ.
- ಒಟ್ಟು ಸುಮಾರು ₹1.30 ಕೋಟಿ ಮೊತ್ತದ ಕ್ಲೈಮ್‌ಗಳನ್ನು ಇತ್ಯರ್ಥಪಡಿಸಲಾಗಿದೆ.

ಈ ಯೋಜನೆಯು ಸೌಹಾರ್ದ ಸಹಕಾರಿ ಸಂಘಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈಗಾಗಲೇ ಒಪ್ಪಂದ ಮಾಡಿಕೊಂಡಿರುವ ಸಂಘಗಳಲ್ಲಿ ಈ ಸಂಸ್ಥೆಯ ವಿಮಾ ಉತ್ಪನ್ನಗಳು ಮತ್ತು ಸೇವೆಗಳಿಗೆ ಉತ್ತಮ ಮೆಚ್ಚುಗೆ ವ್ಯಕ್ತವಾಗಿದೆ ಎಂದು ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಶ್ರೀ A. S. ಶ್ರೀನಿವಾಸನ್, ಕರ್ನಾಟಕ ರಾಜ್ಯದ ಮುಖ್ಯಸ್ಥರು (Head – Karnataka), ಮೊಬೈಲ್ ಸಂಖ್ಯೆ: 9980864412

ನಿಮ್ಮ ಸಾಲಕ್ಕೆ ಸಂಪೂರ್ಣ ವಿಮಾ ರಕ್ಷಣೆ –ನಿಮ್ಮ ಕುಟುಂಬಕ್ಕೆ ಆರ್ಥಿಕ ಭದ್ರತೆ

ಮಾನ್ಯ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಎಸ್. ಸವದಿ ಇವರ ಅಧ್ಯಕ್ಷತೆಯಲ್ಲಿ ನಡೆದ 73ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ –1



ಬೆಂಗಳೂರು : ದಿನಾಂಕ 28.10.2026 ರಂದು ನಡೆದ ಸಹಕಾರ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇವರ ಜಂಟಿಯಾಗಿ ನಡೆದ 73ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆಯನ್ನು ಶ್ರೀ ಲಕ್ಷ್ಮಣ ಎಸ್ ಸವದಿ ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ಇವರು ವಹಿಸಿದ್ದರು, ಕಾರ್ಯಕ್ರಮದಲ್ಲಿ ಶ್ರೀ ಜಿ ಟಿ. ದೇವೇಗೌಡ ಮಾನ್ಯ ಶಾಸಕರು, ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ಬೆಂಗಳೂರು, ಶ್ರೀ ಎಸ್ ಟಿ. ಸೋಮಶೇಖರ್, ಮಾನ್ಯ ಶಾಸಕರು, ಮಾಜಿ ಸಹಕಾರ ಸಚಿವರು, ಅಧ್ಯಕ್ಷರು, ಕರ್ನಾಟಕ ರಾಜ್ಯ ವಸತಿ ಮಹಾ ಮಂಡಳ ನಿ ಬೆಂಗಳೂರು, ಡಾ. ವೆಂಕಟೇಶ್ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಶ್ರೀ ಶೆಟ್ಟಣ್ಣವರ ಮಾನ್ಯ ಸಹಕಾರ ಸಂಘಗಳ ಪ್ರಧಾನ ಕಾರ್ಯದರ್ಶಿಗಳು ಡಾ. ರಾಜೇಂದ್ರ ಕುಮಾರ್, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾರಾಟ ಮಹಾ ಮಂಡಳ ನಿ ಬೆಂಗಳೂರು ಹಾಗೂ ನಿರ್ದೇಶಕರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಶ್ರೀ ವೆಂಕಟೇಶ್ ರಾವ್ ನಾಡಗೌಡ ಅಧ್ಯಕ್ಷರು ಕೆ ಎಫ್ ಸಿ. ಬೆಂಗಳೂರು, ಶ್ರೀ ಬಿ. ಕೆ. ಶಿವಕುಮಾರ್ ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ಬೆಂಗಳೂರು. ಇವರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ್ ಜಾಂತಿಕರ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರುಗಳು ಉಪಸ್ಥಿತರಿದ್ದರು, ಈ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ರಾಜ್ಯದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಸಹಕಾರ ಸಂಘಗಳ ಜಂಟಿ ನಿಬಂಧಕರು, ಉಪ ನಿಬಂಧಕರು, ಸಹಾಯಕ ನಿಬಂಧಕರು, ಸಹಕಾರಿಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಬಂಧಕರ ಕಛೇರಿ ಬೆಂಗಳೂರಿನಲ್ಲಿ ನಡೆದ 73ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ – 2



ಬೆಂಗಳೂರು : ದಿನಾಂಕ 03.11.2026 ರಂದು 73ನೇ ಸಹಕಾರ ಸಪ್ತಾಹ ಪೂರ್ವಭಾವಿ ಸಿದ್ಧತಾ ಸಭೆಯನ್ನು ಮಾನ್ಯ ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ನಡೆಯಿತು.

ಪ್ರತಿವರ್ಷದಂತೆ ಪ್ರಸಕ್ತ ಸಾಲಿನಲ್ಲಿ ಕೂಡ ಸಹಕಾರ ಸಪ್ತಾಹವನ್ನು ನವೆಂಬರ್ 14 ರಿಂದ 20 ರವರೆಗೆ ರಾಜ್ಯಾದಾದ್ಯಂತ ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವ ಬಗ್ಗೆ ಡಾ. ವೆಂಕಟೇಶ್ ಎಂ.ವಿ .ಐಎಎಸ್, ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಸಪ್ತಾಹವನ್ನು ಆಚರಿಸಲು ತೀರ್ಮಾನಿಸಲಾಯಿತು. ಎಲ್ಲಾ ಏಳು ದಿನಗಳ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ, ಅತ್ಯಂತ ಪಾರದರ್ಶಕದಿಂದ ನಿರ್ವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರ ಇಲಾಖೆಯ ಅಪರ ನಿಬಂಧಕರು, ಜಂಟಿ ನಿಬಂಧರು, ಉಪ ನಿಬಂಧಕರು, ರಾಜ್ಯದ ವಿವಿಧ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

ಆಡಳಿತ ಪರಣಿತಿ ತರಬೇತಿ ಕಾರ್ಯಕ್ರಮ



ಕೊಡಗು : ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 06 ಅಕ್ಟೋಬರ್ 2026ರ ಮಂಗಳವಾರದಂದು ಬೆಳಗ್ಗೆ 10.00 ಗಂಟೆಗೆ ಹೋಟೆಲ್ ಟಾಪ್ ಇನ್ ಟೌನ್, ಕೊಪ್ಪ ಗೇಟ್ ಹತ್ತಿರ, ಬಿ.ಎಂ ರಸ್ತೆ, ಕುಶಾಲನಗರ, ಕೊಡಗು ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಮಹದೇವಸ್ವಾಮಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣ ರಾವ್ ರವರು, ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಮುತ್ತಣ್ಣ ಎನ್ ಪಿ ರವರು, ಶ್ರೀ ಕಾಳಪ್ಪ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ 14 ಸೌಹಾರ್ದ ಸಹಕಾರಿಗಳಿಂದ 65 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿಯ ಪ್ರಥಮ ಅವಧಿಯಲ್ಲಿ ಸಹಕಾರಿಯ ಬೆಳವಣಿಗೆಯಲ್ಲಿ ನಿರ್ದೇಶಕರ ಪಾತ್ರ ಈ ವಿಷಯದ ಕುರಿತು ಮಾನ್ಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ರವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ ಸಹಕಾರಿಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಉಪನ್ಯಾಸವನ್ನು ಮಾನ್ಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ರವರು ಉಪನ್ಯಾಸ ನೀಡಿದರು.

ಪ್ರವೇಶ ತರಬೇತಿ



ಕಲಬುರಗಿ : ದಿನಾಂಕ 16.10.2026ರಂದು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ 2024–25, 2025–26 ಮತ್ತು 2026–27 ನೂತನವಾಗಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ. "ಪ್ರವೇಶ ತರಬೇತಿ" ಯನ್ನು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ್ ಮಹಾಜನ ರವರು ನೆರವೇರಿಸಿದರು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಹಂಗಾಮಿ ಅಧ್ಯಕ್ಷರಾದ ಶ್ರೀ ಶಿವಶರಣಪ್ಪ ಕರೂಟಿ ರವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಆಡಳಿತ ಮಂಡಳಿಯ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಕಲಬುರಗಿ ಪ್ರಾಂತದ ಕಾನೂನು ಮತ್ತು ಟಾಸ್ಕ್ ಫೋರ್ಸ್ ವಿಭಾಗದ ಅಧಿಕಾರಿಯಾದ ಶ್ರೀ ಮಹಾಂತಪ್ಪ ರವರು ಉಪನ್ಯಾಸವನ್ನು ನಡೆಸಿಕೊಟ್ಟರು. 2ನೇ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ದಾಖಲೆಗಳ ನಿರ್ವಹಣೆಯ ಕುರಿತು ಕಲಬುರಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ರವರು ಉಪನ್ಯಾಸವನ್ನು ನಡೆಸಿಕೊಟ್ಟರು. ನಂತರದಲ್ಲಿ Easypay, Virtual Account ವಿಷಯಗಳ ಕುರಿತು ಕಲಬುರಗಿ ಪ್ರಾಂತೀಯ ಕಛೇರಿಯ ಹಣಕಾಸು ವಿಭಾಗದ ಹಿರಿಯ ಸಹಾಯಕರಾದ ಶ್ರೀಮತಿ ಮಲ್ಲಮ್ಮ ದೇವಗಾಂವ ರವರು ಮಾಹಿತಿ ನೀಡಿದರು. ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಸೌಹಾರ್ದ ಸಹಕಾರಿಗಳೊಂದಿಗೆ ಸಮಾಲೋಚಿಸಿ ಅಗತ್ಯ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳು ನೆರವೇರಿಸಿದರು. ಸ್ವಾಗತವನ್ನು ಯಾದಗಿರಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ್ ನೆರವೇರಿಸಿದರು. ನಿರೂಪಣೆಯನ್ನು ಕಲಬುರಗಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ್ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 16 ಸೌಹಾರ್ದ ಸಹಕಾರಿಗಳಿಂದ 58 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



ಬೀದರ : ದಿನಾಂಕ. 01.10.2026 ರಂದು ಬೀದರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ರವರು ಉದ್ಘಾಟಿಸಿ ತರಬೇತಿಗೆ ಆಗಮಿಸಿದ ಸಹಕಾರಿಗಳ ಪ್ರತಿನಿಧಿಗಳಿಗೆ ಸ್ವಾಗತ ಕೋರಿದರು. ಸಹಕಾರಿ ಕ್ಷೇತ್ರವು ಬಡ ಜನರು ಆರ್ಥಿಕ ದುರ್ಬಲರು ಶೋಷಣೆಗೆ ಒಳಗಾಗಬಾರದೆಂದು ಮತ್ತು ಸಮಾಜವು ಸುಸ್ಥಿತಿಯಲ್ಲಿ ಸಾಗಲು ಸಹಕಾರಿ ಕ್ಷೇತ್ರವು ಉಗಮಿಸಿತು ಎಂದು ಹೇಳಿದರು. ನಂತರದಲ್ಲಿ ಸೌಹಾರ್ದ ಕಾಯ್ದೆ 1997ರ ಕಲಂ 34ರ ಪ್ರಕಾರ ಸಹಕಾರಿಯು ತನ್ನ ಮಾಹಿತಿಯನ್ನು ನಿಗದಿತ ಸಮಯದೊಳಗೆ ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಬೇಕು ಮತ್ತು ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರೇ ನಿಜವಾದ ಮಾಲೀಕರು ಮತ್ತು ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಂಡು ಕಾರ್ಯನಿರ್ವಹಿಸಿದರೆ ಸಹಕಾರಿಗಳು ಆರ್ಥಿಕವಾಗಿ ಎತ್ತರಕ್ಕೆ ಬೆಳೆಯುತ್ತವೆ ಎಂದು ಸಲಹೆ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 1997ರ ಕಾಯ್ದೆಯಲ್ಲಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆ ಹಾಗೂ ಸಾಮಾನ್ಯ ಸಭೆಯ ಮಾಹಿತಿ ಸಲ್ಲಿಸುವ ಕುರಿತು ಶ್ರೀ ಶುಕರಾಜ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ರವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಬೀದರ ತಾಲೂಕಿನ 20 ಸೌಹಾರ್ದ ಸಹಕಾರಿಗಳಿಂದ 21 ಸದಸ್ಯರು ಪ್ರಯೋಜನ ಪಡೆದರು.



ಯಾದಗಿರಿ : ದಿನಾಂಕ 03.10.2026 ರಂದು ಯಾದಗಿರಿ ಜಿಲ್ಲೆಯ ಯಾದಗಿರಿ ಮತ್ತು ಗುರುಮಿಠಕಲ್ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಯಾದಗಿರಿ ನಗರದ ಶುಭನಂದಿ ಸೌಹಾರ್ದ ಸಹಕಾರಿ ಸಂಘದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಮಾನ್ಯ ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಮಾನ್ಯ ಪ್ರಾಂತೀಯ ಅಧಿಕಾರಿಗಳು ಇತ್ತೀಚಿನ ಕಾಯ್ದೆ ತಿದ್ದುಪಡಿ, ಸಂಯುಕ್ತ ಸಹಕಾರಿಯ ಸುತ್ತೋಲೆಗಳು, ಕಲಂ 34 ರ ಕುರಿತು ಮಾಹಿತಿ ನೀಡಿದರು. ಒಟ್ಟು 07 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 03.10.2026 ರಂದು ಯಾದಗಿರಿ ಜಿಲ್ಲೆಯ ಶಹಪುರ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶಹಾಪುರ ನಗರದ ಶಹಾಪುರ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಮಾನ್ಯ ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಮಾನ್ಯ ಪ್ರಾಂತೀಯ ಅಧಿಕಾರಿಗಳು ಇತ್ತೀಚಿನ ಕಾಯ್ದೆ ತಿದ್ದುಪಡಿ, ಸಂಯುಕ್ತ ಸಹಕಾರಿಯ ಸುತ್ತೋಲೆಗಳು, ಕಲಂ 34 ರ ಕುರಿತು ಮಾಹಿತಿ ನೀಡಿದರು. ಒಟ್ಟು 10 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



ಧಾರವಾಡ : ದಿನಾಂಕ 01.10.2026 ರಂದು ಧಾರವಾಡ ಜಿಲ್ಲೆಯ ಕಲಘಟಗಿ, ಕುಂದಗೋಳ, ನವಲಗುಂದ, ಅಳ್ನಾವರ ತಾಲ್ಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಸಂಪರ್ಕ ಕಛೇರಿ ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ವಹಿಸಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆ ಹಾಗೂ ಸಾಮಾನ್ಯ ಸಭೆಯ ಮಾಹಿತಿ ಸಲ್ಲಿಸುವ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ ತಾಲ್ಲೂಕಿನ ಒಟ್ಟು 8 ಸೌಹಾರ್ದ ಸಹಕಾರಿಗಳಿಂದ 9 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.



ದಾವಣಗೆರೆ : ದಿನಾಂಕ 28.10.2026ರಂದು ದಾವಣಗೆರೆ ಜಿಲ್ಲೆಯ ಹರಿಹರ, ನ್ಯಾಮತಿ, ಹೊನ್ನಾಳಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿ ಇಂಡಿಯನ್ ಸೌಹಾರ್ದ ಕೋ–ಆಪರೇಟಿವ್ ಲಿ, ಹರಿಹರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ನೆರವೇರಿಸಿ ಸಹಕಾರಿ ಸಂಘಗಳ ಬೆಳವಣಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ದಿ ಇಂಡಿಯನ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹುಲಿಗೆಪ್ಪ ಸಿ.ಎನ್ ರವರು ಉಪಸ್ಥಿತರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ 34ರ ಮಾಹಿತಿ ಸಲ್ಲಿಕೆ ಹಾಗೂ ಶಾಸನಬದ್ಧ ಮಾಹಿತಿ ಸಲ್ಲಿಸುವ ಕುರಿತು ಮಾಹಿತಿ ನೀಡಿದರು. ಕರಾವಳಿ ಸೌಹಾರ್ದ ಸಹಕಾರಿಯ ಸಿಬ್ಬಂದಿಯಾದ ಶ್ರೀ ಯೋಗೇಶ್ ರವರು ದಾವಾ ದಾಖಲಾತಿಯ ಅರ್ಜಿ ಭರ್ತಿ ಮಾಡುವ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 23 ಜನ ಭಾಗವಹಿಸಿದ್ದರು.



ಕೊಪ್ಪಳ : ದಿನಾಂಕ 29.10.2026 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗ್ರಾಮೀಣ ಭಾಗದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಸಂಪರ್ಕ ಕಛೇರಿ ಗಂಗಾವತಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆ ಹಾಗೂ ವಾರ್ಷಿಕ ಶುಲ್ಕ ಈಜೀಪೇ ಮೂಲಕ ಹಾಗೂ virtual ಮೂಲಕ ಪಾವತಿಸುವ ಕುರಿತು ಹಾಗೂ ಆಡಳಿತ ಮಂಡಳಿಯ ಅಧಿಕಾರಿಗಳು ಮತ್ತು ಪ್ರಕಾರ್ಯಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ ರವರು ಮಾಹಿತಿ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ 17 ಸೌಹಾರ್ದ ಸಹಕಾರಿಗಳಿಂದ 25 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.



ಮಂಡ್ಯ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿನ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಕ್ಲಸ್ಟರ್ ಮಟ್ಟದ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 31.10.2026ರಂದು "ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಎಂ ಲಿಂಗಯ್ಯ ಬಿಲ್ಡಿಂಗ್, 1ನೇ ಮಹಡಿ, ಮಹಾಲಕ್ಷ್ಮೀ ಸ್ವೀಟ್ಸ್ ಎದುರು, ವಿ.ವಿ ರಸ್ತೆ, ಮಂಡ್ಯ. ಈ ಕಛೇರಿಯ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ಗುರುರಾಜ್ ಬಿ.ಟಿ, ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು. ಶ್ರೀ ಸಿದ್ದಲಿಂಗಯ್ಯ, ಉಪಾಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ.,ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು, ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ, ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ನುಡಿದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು.

ಈ ಕಾರ್ಯಗಾರದ ಮೊದಲನೇ ಅವಧಿಯಲ್ಲಿ "ಸಹಕಾರಿಯಲ್ಲಿ ದಾಖಲಾತಿ ನಿರ್ವಹಣೆ" ಕುರಿತು ಶ್ರೀ ಸಂಕೀರ್ತನ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಇವರು "ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಕೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ನ್ಯೂನತೆಗಳು ಹಾಗೂ ಅನುಪಾಲನೆ" ಎಂಬ ವಿಷಯದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರುಗಳೊಂದಿಗೆ ಚರ್ಚಿಸಿದರು, ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 30 ಸೌಹಾರ್ದ ಸಹಕಾರಿಗಳಿಂದ 33 ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ



ಗಾಂಧೀ ಸರಳತೆಯ ಮೂರ್ತಿ, ಶಾಸ್ತ್ರಿ ತ್ಯಾಗದ ಸ್ಫೂರ್ತಿ : ಶ್ರೀ ಗುರುನಾಥ ಜಾಂತಿಕರ್

ಬೀದರ : ಮಹಾತ್ಮಾ ಗಾಂಧೀಜಿಯವರು ಸರಳತೆಯ ಮೂರ್ತಿಯಾದರೆ, ಮಾಜಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರೀ ತ್ಯಾಗದ ಸ್ಫೂರ್ತಿಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ್ ತಿಳಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಗಾಂಧೀ ಜಯಂತಿ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮವನ್ನು ಆಚರಿಸಲಾಯಿತು. ದಿನಾಂಕ 2.10.2026 ರಂದು ಶುಕ್ರವಾರ ನಗರದ ಹೊರವಲಯದಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಲ್ಲಿ ರಾಷ್ಟ್ರಪಿತಾ ಮಹಾತ್ಮಾ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹಾದ್ದೂರ ಶಾಸ್ತ್ರೀ ರವರ ಜಯಂತಿಗಳನ್ನು ಆಚರಿಸುವುದರಿಂದ ಯಾವುದೇ ಸಾರ್ಥಕತೆಯಿಲ್ಲ. ಬದಲಾಗಿ ಈ ಮಹಾನ್ ನಾಯಕರ ಮೌಲ್ಯಗಳು, ಸರಳತೆ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ. ಜಯಂತಿಗಳು ಕೇವಲ ಶಾಸ್ತ್ರಕ್ಕಾಗಿ ಆಚರಣೆ ಮಾಡದೆ, ಸಮಾಜ–ಕ್ಕೆ ನಿಜವಾದ ಫಲಶೃತಿ ನೀಡುವ ಉದ್ದೇಶದಿಂದ ಆಚರಿಸಬೇಕು. ವಿಶ್ವ ಅಹಿಂಸಾ ದಿನವನ್ನಾಗಿ ಆಚರಿಸಲ್ಪಡುವ ಗಾಂಧಿ ಜಯಂತಿಯಂದು ಅವರ ಸರಳತೆ ಮತ್ತು ಹೋರಾಟವನ್ನು ವಿಸ್ತೃತವಾಗಿ ಸ್ಮರಿಸಬೇಕಿದೆ ಎಂದರು. ದೇಶದ ಎರಡನೇ ಪ್ರಧಾನಿಯಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿ ಹುದ್ದೆಗೇರಿದರೂ ಕಛೇರಿಯಲ್ಲಿದ್ದ ಹವಾನಿಯಂತ್ರಕ (ಎಸಿ) ಮತ್ತು ದುಬಾರಿ ಪೀಠೋಪಕರಣಗಳನ್ನು ತಮಗೆ ಅವಶ್ಯಕತೆವಿಲ್ಲವೆಂದು ತೆರವುಗೊಳಿಸಿದ ಅತ್ಯಂತ ಸರಳ ಜೀವಿ ಅವರಾಗಿದ್ದರು. ಒಮ್ಮೆ ರೈಲು ಅಪಘಾತವಾದಾಗ ಅದರ ನೈತಿಕ ಹೊಣೆ ಹೊತ್ತು ರೈಲ್ವೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷ ವಾಕ್ಯವನ್ನು ನೀಡುವುದರ ಜೊತೆಗೆ, ರೈತರಿಗೆ ಪ್ರೇರಣೆಯಾಗಲು ತಮ್ಮ ನಿವಾಸದಲ್ಲೇ ಉಳುಮೆ ಮಾಡಿದ ಬಗ್ಗೆ ತಿಳಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಕರಾಜ ಅವರು ಸ್ವಾಗತಿಸಿ, ವಂದನಾರ್ಪಣೆ ನೆರವೇರಿಸಿದರು. ರೇಣುಕಾ ಮಾಹೇಶ್ವರ ಸೌಹಾರ್ದದ ಉಪಾಧ್ಯಕ್ಷರಾದ ಶ್ರೀಕಾಂತ ಸ್ವಾಮಿ ಸೋಲಪುರ ಪ್ರಾಸ್ತಾವಿಕ ನುಡಿದರು. ಪ್ರವಾಸಿ ಸೌಹಾರ್ದದ ನಿರ್ದೇಶಕರಾದ ಶ್ರೀ ಸಂಜೀವಕುಮಾರ ಸಜ್ಜನ್, ಕಲ್ಯಾಣ ಪತ್ತಿನ ಸೌಹಾರ್ದದ ಮುಖ್ಯಕಾರ್ಯನಿರ್ವಾಕರಾದ ಶ್ರೀ ಶಿವರಾಜ ಹೂಗಾರ, ಲಿಂಗಾಯತ ಸಮೃದ್ಧಿ ಸಹಕಾರಿಯ ಮುಖ್ಯಕಾರ್ಯನಿರ್ವಾಕರಾದ ಶ್ರೀ ನಾಗೇಶ ಹಾಗೂ ಇತರೆ ಸೌಹಾರ್ದ ಸಹಕಾರಿಗಳಿಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಶ್ರೀ ಪ್ರಮೋದ, ಶ್ರೀ ಸಂಜುಕುಮಾರ, ಶ್ರೀ ಶಿವಕುಮಾರ, ಶ್ರೀ ಶ್ರೀಕಾಂತ, ಶ್ರೀ ಶಿವಾನಂದ, ಶ್ರೀ ಓಂಕಾರ ಸ್ವಾಮಿ ಶ್ರೀ ಸಂತೋಷ, ಜ್ಯೋತಿ ಶ್ರೀ ಶ್ರೀಕಾಂತ ಸ್ವಾಮಿ, ಶ್ರೀ ರಾಹುಲ ಪೋಲಾ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯಕಾರ್ಯನಿರ್ವಾಕರಾದ ಶ್ರೀ ಅಮೃತ ಹೊಸಮನಿ ಉಪಸ್ಥಿತರಿದ್ದರು.

ವಿಷಯಾಧಾರಿತ ತರಬೇತಿ ಕಾರ್ಯಕ್ರಮ



ಬಳ್ಳಾರಿ : ದಿನಾಂಕ 24.10.2026 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ, ಬಳ್ಳಾರಿ ನಗರದ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ, ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ಹಾಗೂ ಸಿಬ್ಬಂದಿಗಳಿಗಾಗಿ ವಿಷಯಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ರವರು ವಹಿಸಿದರು, ಉದ್ಘಾಟನೆಯನ್ನು ಶ್ರೀ ಗಾದಂ ಗೋಪಾಲಕೃಷ್ಣ ಮಾನ್ಯ ಅಧ್ಯಕ್ಷರು ಕನ್ನಿಕಾ ಪರಮೇಶ್ವರಿ ದೇವಸ್ಥಾನ ಬಳ್ಳಾರಿ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನಾಸಿರ್ ಅಲಿ ಮಾನ್ಯ ಅಧ್ಯಕ್ಷರು ಬಳ್ಳಾರಿ ಕಾರುಣ್ಯ ಸೌಹಾರ್ದ ಸಹಕಾರಿ ನಿ., ಬಳ್ಳಾರಿ ಹಾಗೂ ಗ್ರಾಮೀಣ ಬ್ಯಾಂಕ್ ನಿವೃತ್ತ ಅಧಿಕಾರಿಗಳಾದ ಶ್ರೀ ವಾಮನರಾವ್ ವಹಿಸಿದರು. ಶ್ರೀ ರಾಘವೇಂದ್ರ ಆಚಾರ್ಯ ಇವರು ಸ್ವಾಗತಿಸಿದರು, ಶ್ರೀ ವೀರಶಟ್ಟಿ ಇವರು ನಿರೂಪಿಸಿದರು. ವಂದನಾರ್ಪಣೆ: ಶ್ರೀ ಅನಿಲ್ ಕುಮಾರ್ ವಂದಿಸಿದರು. ಮೊದಲನೇ ಅವಧಿ: ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಲಿಯಾಕತ್ ಅಲಿ, ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರು, ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಭಾ ನಡಾವಳಿ ಮತ್ತು ನಿರ್ಣಾಯಗಳ ದಾಖಲಿಸುವ ಕ್ರಮಗಳ ಕುರಿತು ಮಾಹಿತಿ ನೀಡಿದರು. ಎರಡನೇ ಅವಧಿಯಲ್ಲಿ : ಶ್ರೀ ಬಿ.ಜೆ ಕುಲ್ಕರ್ಣಿ, ನಿವೃತ್ತ ಬ್ಯಾಂಕ್ ಅಧಿಕಾರಿಗಳು ಇವರು ಸೌಹಾರ್ದ ಸಹಕಾ ರಿಗಳಲ್ಲಿ AI ತಂತ್ರಜ್ಞಾನ ಬಳಕೆ ಮತ್ತು ಉಪಯೋಗ ಕುರಿತು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯಿಂದ 70 ಸೌಹಾರ್ದ ಸಹಕಾರಿಗಳಿಂದ 95 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಶ್ರೀ ವಿ.ಜೆ ಕಾರಕೂನ್ ರವರಿಗೆ ಬೀಳ್ಕೊಡುಗೆ





ಬೆಂಗಳೂರು : ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಮುಖ್ಯಸ್ಥರಾಗಿ, ಸಲಹೆಗಾರರಾಗಿ 19 ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿದ ಶ್ರೀ ವಿ.ಜೆ ಕಾರಕೂನ್ ರವರು ಸಂಯುಕ್ತ ಸಹಕಾರಿ ಸೇವೆಯಿಂದ ಬಿಡುಗಡೆ ಬಯಸಿದ್ದರಿಂದ ಅವರನ್ನು ದಿನಾಂಕ: 31.10.2026ರಂದು ಸೇವೆಯಿಂದ ಬಿಡುಗಡೆ ಮಾಡಲಾಗಿದೆ ಹಾಗೂ ಅದೇ ದಿನ ಸಂಯುಕ್ತ ಸಹಕಾರಿ ಸಿಬ್ಬಂದಿಗಳು ಅವರಿಗೆ ಅಭಿವಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮತ್ತು ದಿನಾಂಕ: 04.11.2026 ರಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ವತಿಯಿಂದ ಶ್ರೀಯುತರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ವಹಿಸಿದ್ದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಸ್ವಾಗತವನ್ನು ಕೋರಿ ಶ್ರೀಯುತ ವಿ.ಜೆ ಕಾರಕೂನ್ ರವರ ಸೇವೆಯಿಂದ ಬಿಡುಗಡೆ ಹೊಂದಿದ್ದಾರೆ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ನಿರ್ದೇಶಕರುಗಳ ಪರವಾಗಿ ಮಾನ್ಯ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಶ್ರೀ ಕಾರಕೂನ್ ರವರು ಸಂಯುಕ್ತ ಸಹಕಾರಿಯ ತರಬೇತಿ ವಿಭಾಗಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ಶ್ರೀಯುತ ವಿ.ಜೆ ಕಾರಕೂನ್ ರವರು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 19 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ಪ್ರಸಕ್ತ ಸೇವೆಯಿಂದ ಬಿಡುಗಡೆ ಹೊಂದುತ್ತಿರುವುದು ಸಂಯುಕ್ತ ಸಹಕಾರಿಗೆ ಒಂದು ಸವಾಲು ಆಗದ ರೀತಿಯಲ್ಲಿ ಹಾಲಿ ಇರುವ ಅಧಿಕಾರಿಗಳು & ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲು ಸಿದ್ಧರಾಗಬೇಕು ಮತ್ತು ಶ್ರೀಯುತ ಕಾರಕೂನ್ ರವರು ಮುಂದಿನ ದಿನಗಳಲ್ಲಿ ಅವಶ್ಯಕತೆ ಇದ್ದಾಗ ಮಾರ್ಗದರ್ಶನ ಮಾಡಬೇಕೆಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಶ್ರೀಯುತ ವಿ. ಜೆ ಕಾರಕೂನ್ ರವರ ಮುಂದಿನ ಜೀವನ ಸುಖಮಯವಾಗಿರಲೆಂದು ಹಾರೈಸಿದರು.

ಕಲಬುರಗಿ : ದಿನಾಂಕ 02.10.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿಯ ಪೂಜಾ ಕಾರ್ಯಕ್ರಮವನ್ನು ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮೈಸೂರು : ದಿನಾಂಕ 02.10.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಇದರ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿಯ ಪೂಜಾ ಕಾರ್ಯಕ್ರಮವನ್ನು ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಬೆಳಗಾವಿ : ದಿನಾಂಕ 02.10.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿಯ ಪೂಜಾ ಕಾರ್ಯಕ್ರಮವನ್ನು ಪ್ರಾಂತೀಯ ಅಧಿಕಾರಿಯಾದ ಶ್ರೀ ಬಸವರಾಜ ಹೊಂಗಲ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮದ ಸುತ್ತೋಲೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

ಸಂಖ್ಯೆ:ಸಂಸ/ತ&ಶಿ.ವಿ/2026-27/0932 ದಿನಾಂಕ : 27.10.2026

ಇವರಿಗೆ,
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು,
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

ವಿಷಯ: ಸೌಹಾರ್ದ ಸಹಕಾರಿಗಳು ತಮ್ಮ ಸಿಬ್ಬಂದಿಗಳನ್ನು 25ನೇ ತಂಡದ 10 ದಿನಗಳ "ವ್ಯಕ್ತಿತ್ವ ವಿಕಸನ ತರಬೇತಿ"ಗೆ ಅಭ್ಯರ್ಥಿಗಳಾಗಿ ಕಳುಹಿಸುವ ಕುರಿತು.

ಉಲ್ಲೇಖ: ದಿನಾಂಕ 24.02.2026ರಂದು ನಡೆದ ಆಡಳಿತ ಮಂಡಲಿ ಸಭೆಯ 33ರಲ್ಲಿ ಅನುಮೋದಿಸಿರುವಂತೆ.

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ, ನೇತಾರನಾಗಿ ಈ ಸೌಹಾರ್ದ ಕ್ಷೇತ್ರದ ಅಭಿವೃದ್ಧಿಗಾಗಿ ಶಾಸನಬದ್ಧ ಕಾರ್ಯಗಳ ನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ರೀತಿಯ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ದೀರ್ಘಾವಧಿ ತರಬೇತಿಯನ್ನು ಆಯೋಜಿಸುತ್ತಾ ಬಂದಿದೆ. ಈಗಾಗಲೇ ಹುಲಕೋಟಿ, ಕುಪ್ಪಳ್ಳಿ, ಕೆಮ್ಮಣ್ಣುಗುಂಡಿ, ಮೈಸೂರು, ಧಾರವಾಡ, ಹಂಪಿ, ಹೆಗ್ಗೋಡು, ಗುರುವಾಯನಕೆರೆ, ಯಲ್ಲಾಪುರ, ಕಮಲಾಪುರ, ಬೆಂಗಳೂರು, ಕೂಡಲಸಂಗಮ, ಶ್ರೀರಂಗಪಟ್ಟಣ, ಕೃಷಿವಿಶ್ವವಿದ್ಯಾಲಯ ರಾಯಚೂರು, ಒಡಿಯೂರು ಈ ಸ್ಥಳಗಳಲ್ಲಿ ನಡೆಸಿದ್ದು, ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು, ಸಿಬ್ಬಂದಿಗಳ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿ ಗಣ್ಯರು ಅಭಿಪ್ರಾಯ ನೀಡಿದ್ದಾರೆ. **ಪ್ರಸ್ತುತ 25ನೇ ತಂಡದ ತರಬೇತಿ ಕಾರ್ಯಕ್ರಮವನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಮೈಸೂರು ಇಲ್ಲಿ ದಿನಾಂಕ 10 ರಿಂದ 19 ಡಿಸೆಂಬರ್ 2026ರ ವರೆಗೆ ನಡೆಸಲು ತೀರ್ಮಾನಿಸಲಾಗಿದೆ.** ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.

ತರಬೇತಿ ವಿಷಯಗಳು

- ಸಹಕಾರ - ಸಹಕಾರ ಸಂಘ, ಸಹಕಾರ ತತ್ವಗಳು, ಸಹಕಾರ ಕಾಯ್ದೆಗಳು, ಸಹಕಾರ ಚಳುವಳಿಯ ಹುಟ್ಟು, ಬೆಳವಣಿಗೆ, ಸಾಧನೆಗಳು.
- ಸೌಹಾರ್ದ ಸಹಕಾರಿ ಕಾಯ್ದೆ-1997ರ ಆಶಯ, ಹುಟ್ಟು, ಬೆಳವಣಿಗೆ, ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು, ಕಾಯ್ದೆಯ ಮುಖ್ಯಾಂಶಗಳು, ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
- ಕಛೇರಿ ಆಡಳಿತ ನಿರ್ವಹಣೆ, ಕಡತಗಳ ನಿರ್ವಹಣೆ, ಸಮಯ ಪಾಲನೆ, ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ.
- ಸಭೆಗಳು - ಆಡಳಿತ ಮಂಡಲಿ ಸಭೆ, ವಾರ್ಷಿಕ ಸಾಮಾನ್ಯ ಸಭೆ, ವಿಶೇಷ ಸಭೆ - ಪ್ರಾಯೋಗಿಕ-1.
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ, ಜಮಾ-ಖರ್ಚು, ಲಾಭ-ನಷ್ಟ ಖಾತೆ, ಆಸ್ತಿ-ಜವಾಬ್ದಾರಿ ತಖ್ತೆ: ಬ್ಯಾಂಕ್ ಸಮನ್ವಯ ಪಟ್ಟಿ (Balance sheet)ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು. -ಪ್ರಾಯೋಗಿಕ-2.
- ಹಣಕಾಸಿನ ನಿರ್ವಹಣೆ, ಸಂಪನ್ಮೂಲಗಳ ಕ್ರೂಢೀಕರಣ ಹಾಗೂ ಲಾಭದಾಯಕ ಹೂಡಿಕೆ, ಬಡ್ಡಿಯೇತರ ಆದಾಯಗಳು, ಸಾಲಗಳ ನಿರ್ವಹಣೆ, ಗುಣಮಟ್ಟಗಳ ಸಾಲ ನೀಡಿಕೆ.
- ದಾವಾ ಪ್ರಕರಣ ಕಡತಗಳ ದಾಖಲಾತಿ, ಸಾಲ ವಸೂಲಾತಿ ಕ್ರಮಗಳು ಹಾಗೂ ಅಮಲ್ದಾರಿ ವಿಭಾಗದಲ್ಲಿ ಮಾರಾಟಗಾರನ ಕರ್ತವ್ಯಗಳು.
- ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನ ವಿಷಯಗಳು.
- ಕೃತಕ ಬುದ್ಧಿಮತ್ತೆ (AI) ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಮತ್ತು ಬ್ಯಾಂಕಿಂಗ್ ಹಾಗೂ ಸಹಕಾರ ಕ್ಷೇತ್ರದಲ್ಲಿ ಅವುಗಳ ಪರಿಣಾಮಕಾರಿ ಬಳಕೆ.

- ಸೋಷಿಯಲ್ ಮೀಡಿಯಾ ಬಳಕೆ ಹಾಗೂ ಸಹಕಾರ ಕ್ಷೇತ್ರದಲ್ಲಿ ಸೈಬರ್ ಕ್ರೈಮ್ ನಿಯಂತ್ರಣದ ಕ್ರಮಗಳು.
- ಜಿಎಸ್‌ಟಿ, ಆದಾಯ ತೆರಿಗೆ ಹಾಗೂ ಅನ್ವಯವಾಗುವ ವಿವಿಧ ತೆರಿಗೆ ಕಾಯ್ದೆಗಳು.
- ಗ್ರಾಹಕ ಸೇವೆಗಳ ನಿರ್ವಹಣೆ ವ್ಯವಹಾರ ಅಭಿವೃದ್ಧಿ ಯೋಜನೆಗಳು.
- ಸಿಬ್ಬಂದಿಗಳ ಕಾರ್ಯಗಳ ಒತ್ತಡ ನಿರ್ವಹಣೆ, ವ್ಯಕ್ತಿತ್ವ ವಿಕಸನ, ಮಾನವೀಯ ಮೌಲ್ಯಗಳ ನಿರ್ವಹಣೆ.
- ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.

ತರಬೇತಿ ಅವಧಿಯಲ್ಲಿ ಪಠ್ಯ ಕ್ರಮದಂತೆ ಪ್ರತಿ ದಿನ ಯೋಗ, ಸಾಮೂಹಿಕ ಕಾರ್ಯಕ್ರಮಗಳು, ಪ್ರಾಯೋಗಿಕಗಳು, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ವ್ಯವಸ್ಥೆ ಇರುತ್ತದೆ.

ಸೌಹಾರ್ದ ಸಹಕಾರಿಗಳು ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಮ್ಮ ಸಹಕಾರಿಯ ಸಿಬ್ಬಂದಿಗಳನ್ನು ಕಳುಹಿಸುವುದು ಅಗತ್ಯವಿರುತ್ತದೆ. ಸದರಿ ತರಬೇತಿಯಲ್ಲಿ 60 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದ 60 ಸಿಬ್ಬಂದಿಯವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಮುಂದಿನ ತಂಡದಲ್ಲಿ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ಸಿಬ್ಬಂದಿಗಳು ತರಬೇತಿಯನ್ನು ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು.

ಸೌಹಾರ್ದ ಸಹಕಾರಿಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅರ್ಜಿಯ ಜೊತೆಗೆ ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿ ಮಾಡಿ ಶೀಘ್ರವಾಗಿ ಕಳುಹಿಸಿ ನಿಮ್ಮ ಸ್ಥಾನ ಕಾಯ್ದಿರಿಸಿಕೊಳ್ಳಲು ತಿಳಿಸಿದೆ. ತರಬೇತಿಗೆ ಹಾಜರಾಗಲು ನೋಂದಾಯಿಸಿದ ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ತರಬೇತಿ ಅಧಿಕಾರಿಗಳಾದ ಶ್ರೀ ಚಂದ್ರಶೇಖರಯ್ಯ.ಎಂ (8884460266), ಶ್ರೀ ಬಾಬು ಎಂ ಪಠಾಣ (9364702063) ಸಂಪರ್ಕಿಸಲು ಕೋರಿದೆ.

: ತರಬೇತಿ ಕಾರ್ಯಕ್ರಮದ ವಿವರಗಳು : -

- **ಭಾಗವಹಿಸುವ ವರ್ಗ** : ಮುಖ್ಯಕಾರ್ಯನಿರ್ವಾಹಕರು, ಕಾರ್ಯದರ್ಶಿಗಳು, ಅಧಿಕಾರಿಗಳು.
- **ತರಬೇತಿಯ ಅವಧಿ** : 10 ದಿನಗಳಲ್ಲಿ - 8 ದಿನಗಳು ಒಳಾಂಗಣ ತರಬೇತಿ, 2 ದಿನಗಳು ಪ್ರಾಯೋಗಿಕ ತರಬೇತಿ ಮತ್ತು ಸ್ಥಳೀಯ ಸಹಕಾರ ಸಂಸ್ಥೆಗಳ ಅಧ್ಯಯನ ಪ್ರವಾಸ.
- **ತರಬೇತಿ ನಡೆಯುವ ಸ್ಥಳ:** ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಮೈಸೂರು.
- **ತರಬೇತಿ ಸೌಲಭ್ಯ** : ಉಪಹಾರ, ಊಟ-ವಸತಿ, ಅಧ್ಯಯನ ಸಾಹಿತ್ಯ, ಯೋಗ ತರಬೇತಿ, ಹಾಗೂ ಉತ್ತಮ ಸಹಕಾರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. (ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.)
- **ವ್ಯವಸ್ಥೆ ನಿರ್ವಹಣೆ ಶುಲ್ಕ:** ರೂ. 6,000/- + 18% ಜಿಎಸ್‌ಟಿ ಸೇರಿ ಒಟ್ಟು ಮೊತ್ತ ರೂ.7,080/- (ಊಟ, ವಸತಿ ವ್ಯವಸ್ಥೆಗಳಿಗಾಗಿ) ಶುಲ್ಕವನ್ನು ಸೌಹಾರ್ದ ಸಹಕಾರಿಯಿಂದ ಭರಿಸಬೇಕು.
- **ಅಭ್ಯರ್ಥಿಗಳ ಸಂಖ್ಯೆ** : 60 ಮಾತ್ರ

ತರಬೇತಿಯ ದಿನಾಂಕ : **10.12.2026 ರಿಂದ 19.12.2026** ತರಬೇತಿಯ ನೋಂದಣಿ ಶುಲ್ಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಪಡೆದು ಅಗತ್ಯ ದಾಖಲೆಗಳನ್ನು ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಗೆ ಕಳುಹಿಸುವುದು. **ನೋಂದಾವಣೆಗೆ ಕೊನೆಯ ದಿನಾಂಕ: 20.11.2026.**

ವಂದನೆಗಳೊಂದಿಗೆ,

Karnataka State Souharda Federal Co-operative Ltd. Reg. No. RSR / SOU / ACM 136 / Regn. 051 / 2001-02 dated: 04-01-2002 * Bengaluru *

ತಮ್ಮ ವಿಶ್ವಾಸಿ,

(ಶರಣಗೌಡ ಜಿ.ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

ಗಮನಕ್ಕೆ :

ನೋಂದಣಿ ಶುಲ್ಕವನ್ನು ಈ ಕೆಳಗಿನ ಬ್ಯಾಂಕ್ ಖಾತೆಗೆ ಚೆಕ್/ಡಿಡಿ ಮೂಲಕ ಪಾವತಿ ಮಾಡಲು ಕೋರಿದೆ.

IDBI BANK ACCOUNT NUMBER : 0243102000013873

IFSC CODE : IBKL0000243

ನೋಂದಾವಣೆ ಅರ್ಜಿಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಲು ಕೋರಿದೆ.

ಸ್ವಾಗತ



ಬೆಂಗಳೂರು : ದಿನಾಂಕ 02.11.2026 ರಂದು ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಇದರ ಪೀಠಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಪಿ. ಮಹೇಶ್ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್ ಪ್ರಸನ್ನಕುಮಾರ, ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್, ಶ್ರೀ ಎಂ.ಆರ್ ಪ್ರಭುದೇವ್, ವಿಜಯ್ ಸಿ.ಪಿ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.

ಉದ್ಘಾಟನೆ



ಬೆಳಗಾವಿ : ದಿನಾಂಕ 05.09.2026 ರಂದು ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಗೋಕಾಕ ತಾಲೂಕಿನ ಬೇಟಗೇರಿ ಶಾಖೆಯ ಕಟ್ಟಡದ ಉದ್ಘಾಟನೆಯನ್ನು ಅರಭಾಂವಿ ಶಾಸಕರಾದ ಶ್ರೀ ಬಾಲಚಂದ್ರ ಜಾರಕಿಹೋಳಿ ನೆರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಗೋಕಾಕ ಶೂನ್ಯ ಸಂಪಾದನಾ ಮಠದ ಡಾ.ಮುರುಘರಾಜೇಂದ್ರ ಮಹಾಸ್ವಾಮಿಜಿವಹಿಸಿ ಆಶೀರ್ವಚನ ನುಡಿದರು. ಈ ಸಮಾರಂಭದಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸೈದಪ್ಪ ಗದಾಡಿ , ಮಾಜಿ ಸಚಿವರಾದ ಶ್ರೀ ಆರ್.ಎಮ್.ಪಾಟೀಲ , ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ತಡಸನವರ, ಗೋಕಾಕ ಬ್ರಹ್ಮಾನಂದ ಸ್ವಾಮೀಜಿ, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಟಾಸ್ಕಫೋರ್ಸ ಅಧಿಕಾರಿಗಳಾದ ಗಂಗಾರಾಮ ಕೋಳಾಪ್ಪೆ, ಸಲಹಾ ಸಮಿತಿ ಸದಸ್ಯರು, ಸಹಕಾರಿಯ ಸಿಬ್ಬಂದಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಬೆಳಗಾವಿ : ದಿನಾಂಕ 08.10.2026 ರಂದು ದಿ. ಶಿಂದೋಳ್ಳಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಶಿಂದೋಳ್ಳಿ, ತಾ:ಬೆಳಗಾವಿ ಸಹಕಾರಿಯ ದಶಮಾನೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ನೆರವೇರಿಸಿದರು. ಅಥಿತಿಗಳಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರಿಮತಿ ಫಕೀರವ್ವಾ ಕರೇಗಾರ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥಾಪಕರಾದ ಶ್ರೀ ಭೀಮಣ್ಣ ಕರೇಗಾರ, ಆಂತರಿಕ ಲೆಕ್ಕಪರಿಶೋಧಕರು ಹಾಗೂ ಸಲಹೆಗಾರರಾದ ಶ್ರೀ ಶಾಂತಿನಾಥ ನಾಯಿಕ, ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿಗಳು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



ಉಡುಪಿ : ದಿನಾಂಕ 24.09.2026 ರಂದು ಉಡುಪಿ ವಿಶ್ವಭಾರತಿ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಇದರ ವಾರ್ಷಿಕ ಮಹಾಸಭೆ ಮತ್ತು ಸಹಕಾರಿಯ ತನ್ನ ದಶಮಾನೋತ್ಸವ ಕಾರ್ಯಕ್ರಮವನ್ನು ಪದ್ಮಾವತಿ ಸಭಾಭವನ ಉಡುಪಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ಭಾಗವಹಿಸಿ ಸೌಹಾರ್ದ ಸಹಕಾರಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಉಗಮ, ಅಸ್ತಿತ್ವ ಮತ್ತು ಉದ್ದೇಶಗಳ ಬೆಳವಣಿಗೆಯ ಕುರಿತು ಮಾಹಿತಿ ಹಾಗೂ ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಪೂರಕ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ವಿಜಯ್ ಬಿ. ಎಸ್. ರವರು ಸಹಕಾರಿಯ ಸದಸ್ಯರ ತಮ್ಮ ಹಕ್ಕು, ಹೊಣೆಗಾರಿಕೆ, ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ಮತ್ತು ಸಹಕಾರಿಯ ಬೆಳವಣಿಗೆಯಲ್ಲಿ ನಿರ್ದೇಶಕರ ಪಾತ್ರದ ಕುರಿತು, ಆರ್ಥಿಕ ಸಬಲತೆಯ ಮಾನದಂಡಗಳ ಬಗ್ಗೆ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರಿಗೆ ಮಾಹಿತಿಯನ್ನು ನೀಡಿದರು.

ಉಡುಪಿ : ದಿನಾಂಕ 22.10.2026 ಸುಭದ್ರ ಸೌಹಾರ್ದ ಸಹಕಾರಿ ನಿ., ಇದರ ವಿಶೇಷ ಆಡಳಿತ ಮಂಡಳಿಯ ಸಭೆಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ವಹಿಸಿದ್ದರು. ಈ ಸದರಿ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿಕಟ ಪೂರ್ವ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ಸದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಈ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪೂರ್ಣರೂಪದಲ್ಲಿ ಪ್ರಾರಂಭಿಸುವ ಕುರಿತು ಚರ್ಚಿಸಲಾಯಿತು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ. ಎಸ್. ರವರು ಆರ್ಥಿಕ ಸಬಲತೆಯ ಮಾನದಂಡಗಳ ಬಗ್ಗೆ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರಿಗೆ ಮಾಹಿತಿಯನ್ನು ನೀಡಿದರು. ಸಭೆಯ ಸ್ವಾಗತ ಮತ್ತು ವಂದನಾರ್ಪಣೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ. ಎಸ್. ರವರು ನೆರವೇರಿಸಿದರು. ಈ ವಿಶೇಷ ಆಡಳಿತ ಮಂಡಳಿಯಲ್ಲಿ ಸುಭದ್ರ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಕರು ಸೇರಿದಂತೆ ಒಟ್ಟಯ 08 ಜನ ಹಾಜರಾಗಿದ್ದರು.

ತುಮಕೂರು : ದಿನಾಂಕ 29.10.2026ರಂದು ಶ್ರೀ ಶಿವಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯ ವಿಶೇಷ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಟಾಸ್ಕ್‌ಫೋರ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶೊಭಾ ಆರ್. ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಅಧಿಕಾರಿಯಾದ ಶ್ರೀ ರಾಜೇಂದ್ರರಾವ್ ಶಿಂಧೆ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ನರಸಿಂಹಮೂರ್ತಿ ಯು. ರವರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರಾಕೇಶ್ ಜಿ.ಸಿ ರವರು ಹಾಜರಿದ್ದರು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಕಾನೂನು ಕ್ರಮಗಳ ಬಗ್ಗೆ ಮಾಹಿತಿ ನೀಡಿ, ಪರಿವೀಕ್ಷಣಾ ವರದಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವಂತೆ ಮಾರ್ಗದರ್ಶನ ನೀಡಿದರು.

ತುಮಕೂರು : ದಿನಾಂಕ 29.10.2026ರಂದು ಸೆಕ್ರೆಡ್ ಹಾರ್ಟ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ, ತುಮಕೂರು ಸಹಕಾರಿಯ ವಿಶೇಷ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶೊಭಾ ಆರ್. ರವರ ಉಪಸ್ಥಿತಿಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಪರಿವೀಕ್ಷಣಾಧಿಕಾರಿಯಾದ ಶ್ರೀ ರಾಜೇಂದ್ರರಾವ್ ಶಿಂಧೆ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ರಾಬರ್ಟ್ ಡಿಸೋಜ ರವರು, ನಿರ್ದೇಶಕರಾದ ಶ್ರೀ ಸುಜಯ್ ಪಾಯ್ಸ್ ರವರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶೇಖರ್ ಜೆ ರವರು ಹಾಜರಿದ್ದರು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಕಾನೂನು ಕ್ರಮಗಳ ಬಗ್ಗೆ ಮಾಹಿತಿ ನೀಡಿ, ಪರಿವೀಕ್ಷಣಾ ವರದಿಯಲ್ಲಿನ ಉಲ್ಲಂಘನೆಗಳನ್ನು ಸರಿಪಡಿಸಿಕೊಳ್ಳುವಂತೆ ಮಾರ್ಗದರ್ಶನ ನೀಡಿದರು.



ಸಾಲಿಗ್ರಾಮ : ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ(ನಿ.), ಸಾಲಿಗ್ರಾಮ ಇದರ ನೂತನ ವಿಸ್ತೃತ ಕಟ್ಟಡ ನಿರ್ಮಾಣದ ಶಿಲಾನ್ಯಾಸ ಕಾರ್ಯಕ್ರಮ ಇತ್ತೀಚಿಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಸಂಘದ ಅಧ್ಯಕ್ಷ ಶ್ರೀ ಆನಂದ ಸಿ. ಕುಂದರ್ ನೆರವೇರಿಸಿದರು. ಸಂಘದ ನಿವೇಶನದಲ್ಲಿ ಅಂದಾಜು ರೂ. 1.50 ಕೋಟಿ ವಿನ್ಯಾಸದಲ್ಲಿ ವಿಸ್ತೃತ ಕಟ್ಟಡವನ್ನು ನಿರ್ಮಿಸಿ ಶೀಘ್ರ ಸದಸ್ಯರ ಸೇವೆಗೆ ಅರ್ಪಿಸುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರುಗಳಾದ ಶ್ರೀ ಸಂಜೀವ ಜಿ., ಶ್ರೀ ಮಂಜುನಾಥ ಎಸ್.ಕೆ., ಶ್ರೀ ಶಂಕರ ಬಂಗೇರ, ಶ್ರೀ ವಸಂತ ಶೆಟ್ಟಿ, ಶ್ರೀ ವೈ. ಕೃಷ್ಣಮೂರ್ತಿ ಐತಾಳ್, ಶ್ರೀ ಕೃಷ್ಣಪ್ಪ ಮರಕಾಲ, ಶ್ರೀ ಸುಂದರ, ಶ್ರೀ ವೈ. ಗೋಪಾಲ ಭಟ್ಟ, ಶ್ರೀಮತಿ ಶಾಂತಾ ಭಟ್ಟ, ಶ್ರೀಮತಿ ನಾಗರತ್ನ ಬಾಯರಿ ಮತ್ತು ಶ್ರೀಮತಿ ಸವಿತಾ ಪೂಜಾರಿ ಮತ್ತು ಮುಖ್ಯಕಾರ್ಯನಿರ್ವಾಹಕ ಶ್ರೀ ಜಿ.ಎಸ್. ಸೋಮಾಯಾಜಿ ಹಾಗೂ ಸಿಬ್ಬಂದಿ ವರ್ಗ ಮತ್ತು ಸದಸ್ಯ ವರ್ಗ ಉಪಸ್ಥಿತರಿದ್ದರು. ಕೇವಲ ಅತ್ಯಲ್ಪ ಕಾಲಾವಧಿಯಲ್ಲಿ ಸಂಘ ಸದಸ್ಯರ ಸಹಕಾರದಿಂದ ಬೆಳವಣಿಗೆ ಕಂಡು ಸ್ವಂತ ಕಟ್ಟಡ ನಿರ್ಮಾಣಕ್ಕೆ ಮುಂದಾಗಿರುವುದು ಸಂಘದಲ್ಲಿ ಸದಸ್ಯರ ಸಹಭಾಗಿತ್ವ ಫಲವೆಂದರೆ ಅತಿಶೋಯಕ್ತಿಯಾಗಲಾರದು ಎಂದು ಅಧ್ಯಕ್ಷರು ಹೇಳಿದರು.



ಕೊಪ್ಪಳ : ಸ್ಪಂದನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ದಿನಾಂಕ 12.10.2026ರಂದು ಸೋಮವಾರ ಗಂಗಾವತಿ ನಗರದಲ್ಲಿ ಇದರ ನೂತನ ಗೋದಾಮಿನ ಪ್ರಾರಂಭೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀಮದ ಆನೆಗೊಂದಿ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ನಾಗಮೂರ್ತಿ ಮಹಾಸ್ವಾಮಿಗಳು ಶ್ರೀ ಕ್ಷೇತ್ರ ಲೇಬಗಿರಿ ವಹಿಸಿದರು. ಸಹಾಕರಿಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಫತ್ತಾರರವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

'ವಿಕಾಸ್ ಅಹರ್ನಿಶಿ'ಗೆ ಚಾಲನೆ: ಸಹಕಾರಿ ಬ್ಯಾಂಕಿಂಗ್‌ನಲ್ಲಿ ತಂತ್ರಜ್ಞಾನದ ಹೊಸ ಮೈಲಿಗಲ್ಲು

ದಕ್ಷಿಣ ಭಾರತದಲ್ಲೇ ಪ್ರಥಮ ಆಟೋ ವಾಲ್ಟ್ ಸೇಫ್ ಡೆಪಾಸಿಟ್ ಲಾಕರ್ ವ್ಯವಸ್ಥೆ ಅಳವಡಿಸಿದ ಹೊಸಪೇಟೆಯ ವಿಕಾಸ್ ಬ್ಯಾಂಕ್



ಹೊಸಪೇಟೆ : ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಾವೀನ್ಯತೆ, ಸುರಕ್ಷತೆ ಮತ್ತು ಆಧುನಿಕ ತಂತ್ರಜ್ಞಾನಕ್ಕೆ ಹೊಸ ಭಾಷ್ಯ ಬರೆಯುತ್ತಿರುವ ವಿಕಾಸ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ತನ್ನ ಪ್ರಧಾನ ಕಛೇರಿ ಶಾಖೆಯಲ್ಲಿ ಪ್ರತಿಷ್ಠಿತ ಗೋದ್ರೇಜ್ ಸಂಸ್ಥೆಯ 'ಆಟೋ ವಾಲ್ಟ್ ಆಟೋಮ್ಯಾಟೆಡ್ ಸೇಫ್ ಡೆಪಾಸಿಟ್ ಲಾಕರ್' ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ಮಹತ್ವದ ಸಾಧನೆ ಮಾಡಿದೆ. ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಇಂತಹ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಹೆಗ್ಗಳಿಕೆಗೆ ವಿಕಾಸ ಬ್ಯಾಂಕ್ ಪಾತ್ರವಾಗಿದ್ದು, ಸಿ-ಕ್ಲಾಸ್ ನಗರವಾದ ಹೊಸಪೇಟೆಯಿಂದ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಹೊಸ ತಾಂತ್ರಿಕ ಆಯಾಮವನ್ನು ಪರಿಚಯಿಸಿದೆ. ಇದು ಸೌಹಾರ್ದ ಸಹಕಾರ ಕ್ಷೇತ್ರಕ್ಕೂ ಒಂದು ಹೆಮ್ಮೆಯ ವಿಷಯವಾಗಿದೆ.

ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1 ರಂದು ನಡೆದ ಸಮಾರಂಭದಲ್ಲಿ ಕೊಪ್ಪಳ ಗವಿಮಠದ ಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹಾಗೂ ಕೊಟ್ಟೂರು ಮಠದ ಪರಮ ಪೂಜ್ಯ ಬಸವಲಿಂಗ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ, ಗೋದ್ರೇಜ್ ಕಂಪನಿಯ ಉಪಾಧ್ಯಕ್ಷರಾದ ಪರ್ಸಿ ಮಾಸ್ಟರ್ ಹಾಗೂ ಬ್ಯಾಂಕಿನ ಅಧ್ಯಕ್ಷರಾದ ವಿಶ್ವನಾಥ್ ಸಿ. ಹಿರೇಮಠ ಅವರ ಉಪಸ್ಥಿತಿಯಲ್ಲಿ ಈ ನೂತನ ವ್ಯವಸ್ಥೆಯನ್ನು ಲೋಕಾರ್ಪಣೆ ಮಾಡಲಾಯಿತು.

'ಅಹರ್ನಿಶಿ' – ಹಗಲಿರುಳು ಸುರಕ್ಷಿತ ಲಾಕರ್ ಸೇವೆ

'ಅಹರ್ನಿಶಿ' ಎಂದರೆ ಹಗಲಿರುಳು. ಈ ಹೆಸರಿಗೆ ತಕ್ಕಂತೆ, ಗ್ರಾಹಕರ ಅನುಕೂಲಕ್ಕಾಗಿ ವರ್ಷದ 365 ದಿನಗಳೂ, ದಿನದ 24 ಗಂಟೆಗಳೂ ಲಾಕರ್ ಬಳಸುವ ಅವಕಾಶವನ್ನು ಈ ವ್ಯವಸ್ಥೆ ಕಲ್ಪಿಸುತ್ತದೆ. ಸಾಂಪ್ರದಾಯಿಕ ಬ್ಯಾಂಕಿಂಗ್ ಸಮಯದ ಮಿತಿಗಳನ್ನು ಮೀರಿ, ಗ್ರಾಹಕರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಅಮೂಲ್ಯ ವಸ್ತುಗಳನ್ನು ಸುರಕ್ಷಿತವಾಗಿ ಪಡೆಯಲು ಮತ್ತು ಇರಿಸಲು ಅನುಕೂಲವಾಗುವಂತೆ ಈ ತಂತ್ರಜ್ಞಾನವನ್ನು ರೂಪಿಸಲಾಗಿದೆ.

ಗೋದ್ರೇಜ್ ಸಂಸ್ಥೆಯು ಜಪಾನ್‌ನ ITOKI Corporation ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಈ ವ್ಯವಸ್ಥೆಯು ಅತ್ಯಾಧುನಿಕ ರೋಬೋಟಿಕ್ ತಂತ್ರಜ್ಞಾನವನ್ನು ಬಳಸುತ್ತದೆ. ಗ್ರಾಹಕರು ಲಾಕರ್‌ಗಳಿರುವ ಸ್ಥಳದಲ್ಲಿ ಹುಡುಕಾಡುವ ಅಗತ್ಯವಿಲ್ಲ; ಅವರಿಗೆ ಮೀಸಲಾದ ಖಾಸಗಿ ಬೂತ್‌ಗೆ ರೋಬೋಟಿಕ್ ವ್ಯವಸ್ಥೆಯೇ ಸಂಬಂಧಿತ ಲಾಕರ್ ಅನ್ನು ತಲುಪಿಸುತ್ತದೆ. ಇದರಿಂದ ಲಾಕರ್ ಪಡೆಯುವ ಪ್ರಕ್ರಿಯೆ ಹೆಚ್ಚು ಸುಗಮವಾಗುವುದರ ಜೊತೆಗೆ, ಗ್ರಾಹಕರ ಖಾಸಗಿತನಕ್ಕೂ ಆದ್ಯತೆ ದೊರೆಯುತ್ತದೆ.

ಐದು ಹಂತದ ಭದ್ರತೆ – ಸುರಕ್ಷತೆಗೆ ಬಹುಸ್ತರದ ರಕ್ಷಣೆ

ವಿಕಾಸ್ ಅಹರ್ನಿಶಿ ಲಾಕರ್ ವ್ಯವಸ್ಥೆಯ ಪ್ರಮುಖ ಆಕರ್ಷಣೆ ಅದರ ಬಹುಸ್ತರದ ಭದ್ರತಾ ವಿಧಾನ. ಮೊದಲನೇ ಹಂತ ಮುಖಚರ್ಯೆ ಮತ್ತು ಬೆರಳಚ್ಚು ಗುರುತಿಸುವಿಕೆ, ಎರಡನೇ ಹಂತ ಭದ್ರತಾ ಕಪಾಟಿಗೆ ಹೋಗಲು ಕಾರ್ಡ್ ಸ್ವೈಪ್, ಮೂರನೇ ಹಂತ ಕಂಪ್ಯೂಟರಿಗೆ ಕಾರ್ಡ್ ಸೇರಿಸುವಿಕೆ, ನಾಲ್ಕನೇ ಹಂತ ನಾಲ್ಕಂಕಿಯ ರಹಸ್ಯ ಪಿನ್ ಸಂಖ್ಯೆ ಹಾಗೂ ಐದನೇ ಹಂತ ಲಾಕರ್‌ನ ವಿಶಿಷ್ಟ ಕೀ ಸೇರಿದಂತೆ ಐದು ಹಂತಗಳ ದೃಢೀಕರಣ ಕ್ರಮಗಳನ್ನು ಬಳಸಲಾಗಿದೆ. ಈ ಬಹುಹಂತದ ವ್ಯವಸ್ಥೆಯು ಅನಧಿಕೃತ ಪ್ರವೇಶವನ್ನು ತಡೆಯಲು ಮತ್ತು ಗ್ರಾಹಕರ ಅಮೂಲ್ಯ ವಸ್ತುಗಳ ಸುರಕ್ಷತೆಯನ್ನು ಬಲಪಡಿಸಲು ನೆರವಾಗುತ್ತದೆ.

ಸಣ್ಣ ನಗರದಿಂದ ದೊಡ್ಡ ಸಾಧನೆ

ದೊಡ್ಡ ಮಹಾನಗರಗಳ ಬ್ಯಾಂಕುಗಳಿಗಷ್ಟೇ ಸೀಮಿತವೆಂದು ಭಾವಿಸಲಾಗುವ ಅತ್ಯಾಧುನಿಕ ಬ್ಯಾಂಕಿಂಗ್ ತಂತ್ರಜ್ಞಾನವನ್ನು ಹೊಸಪೇಟೆಯಂತಹ ನಗರದಲ್ಲಿ ಪರಿಚಯಿಸಿರುವುದು ವಿಕಾಸ್ ಬ್ಯಾಂಕಿನ ದೂರದೃಷ್ಟಿ ಮತ್ತು ನಾವೀನ್ಯತೆಯ ಬದ್ಧತೆಯನ್ನು ತೋರಿಸುತ್ತದೆ. ಕಳೆದ ಮೂರು ದಶಕಗಳಿಂದ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿರುವ ಬ್ಯಾಂಕ್, ಗುಣಮಟ್ಟ, ವಿಶ್ವಾಸಾರ್ಹತೆ ಮತ್ತು ನವೀನ ಉಪಕ್ರಮಗಳಿಗೆ ಆದ್ಯತೆ ನೀಡುತ್ತಾ ತನ್ನ ಸೇವಾ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ.

ಈ ಸಾಧನೆ ಕೇವಲ ಹೊಸ ಲಾಕರ್ ವ್ಯವಸ್ಥೆಯ ಸ್ಥಾಪನೆಯಲ್ಲ; ಬದಲಾಗುತ್ತಿರುವ ಗ್ರಾಹಕರ ನಿರೀಕ್ಷೆಗಳಿಗೆ ತಕ್ಕಂತೆ ಸಹಕಾರಿ ಬ್ಯಾಂಕುಗಳೂ ತಂತ್ರಜ್ಞಾನ ಆಧಾರಿತ, ಸುರಕ್ಷಿತ ಮತ್ತು ಅನುಕೂಲಕರ ಸೇವೆಗಳನ್ನು ಒದಗಿಸಬಲ್ಲವು ಎಂಬುದಕ್ಕೆ ಸಾಕ್ಷಿಯಾಗಿದೆ. ಸ್ಥಳೀಯ ಬ್ಯಾಂಕೊಂದು ಅಂತರರಾಷ್ಟ್ರೀಯ ತಂತ್ರಜ್ಞಾನದ ನೆರವಿನಿಂದ ಗ್ರಾಹಕ ಸೇವೆಗೆ ಹೊಸ ಮಾನದಂಡ ರೂಪಿಸಿರುವುದು ಇತರ ಸಹಕಾರಿ ಸಂಸ್ಥೆಗಳಿಗೂ ಪ್ರೇರಣೆಯಾಗಬಲ್ಲದು.

'ವಿಕಾಸ್ ಅಹರ್ನಿಶಿ' ಸುರಕ್ಷತೆಗೆ ತಂತ್ರಜ್ಞಾನ, ಸೇವೆಗೆ ಸಮಯದ ಮಿತಿಯಿಲ್ಲ, ಗ್ರಾಹಕ ವಿಶ್ವಾಸಕ್ಕೆ ಹೊಸ ಭರವಸೆ. ಹೊಸಪೇಟೆಯಿಂದ ಆರಂಭವಾದ ಈ ನವೀನ ಹೆಜ್ಜೆ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತಷ್ಟು ಪ್ರಗತಿಗೆ ದಾರಿಯಾಗಲಿ.

ವಾರ್ಷಿಕ ಸಾಮಾನ್ಯ ಸಭೆ



ವಿಜಯಪುರ : ದಿನಾಂಕ 13.09.2026 ರಂದು ಅಥರ್ಗಾ ಗ್ರಾಮೀಣ ಸೌಹಾರ್ದ ಸಹಕಾರಿ ನಿ., ವಿಜಯಪುರ ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ರೇವಣ ಸಿದ್ದೇಶ್ವರ ಮಂಗಳ ಕಾರ್ಯಾಲಯದಲ್ಲಿ ಸಹಕಾರಿಯ ಅಧ್ಯಕ್ಷರಾದ ಅಧ್ಯಕ್ಷರಾದ ಶ್ರೀ ನಾಗರಾಜ ಮ. ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜಯ ಬಿ. ಪಾಟೀಲ ಇವರನ್ನು ಆಹ್ವಾನಿಸಿ ಸನ್ಮಾನಿಸಲಾಯಿತು. ಸಹಕಾರಿಯ ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ. 1,16,27,677/– ಗಳಿಸಿದ್ದು ಸದಸ್ಯರಿಗೆ ಶೇ. 15ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ.



ಹಾನಗಲ್ಲ : ದಿನಾಂಕ : 10/09/2026 ನೇ ಗುರುವಾರ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾನಗಲ್ಲ ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯು ಸಂಸ್ಥೆಯ ಮಹಡಿಯ ಮೇಲೆ ಮಧ್ಯಾಹ್ನ 4.00 ಘಂಟೆಗೆ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿರುತ್ತದೆ.

ಸಂಸ್ಥೆಯು ಸನ್ 2025–26 ನೇ ಸಾಲಿನಲ್ಲಿ ರೂ, 40,47,729.69/– ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ 12% ರಂತೆ ಡಿವ್ಹಿಡೆಂಡ ವಿತರಣೆ ಮಾಡಲು ನಿರ್ಣಯಿಸಲಾಯಿತು.

ಇದೆ ವೇಳೆ SSLC ಹಾಗೂ PUC ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದಂತಹ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವೀತಿಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ವಿತರಿಸಲಾಯಿತು.

ಮಂಗಳೂರು : ಮಂಗಳೂರು ಸೌಹಾರ್ದ ಸಹಕಾರಿ ಸಂಘ ನಿ. ಇದರ 2025–2026ರ ಸಾಲಿನ 16ನೇ ವಾರ್ಷಿಕ ಮಹಾಸಭೆ ದಿನಾಂಕ 09–08–2026ನೇ ಭಾನುವಾರ 12 ಗಂಟೆಗೆ ಮಂಗಳೂರು ಸ್ಟೋರ್ ಸಭಾಂಗಣದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಕೆ. ಭಾಸ್ಕರ್‌ರಾವ್, ಮಾಜಿ ಕಾರ್ಪೋರೇಟರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಧ್ವನಿರಾವ್ ಪ್ರಾರ್ಥನೆ ಮಾಡಿದರು. ಭಾಸ್ಕರ್‌ರಾವ್ ಸ್ವಾಗತ ಮಾಡಿದರು. ನಿರ್ದೇಶಕರಾದ ಜಯಪ್ರಕಾಶ್ ಮಂಡಿಸಿದರು.

ಮುಖ್ಯ ಅತಿಥಿಗಳಾಗಿ ಸಭಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಭಾರತಿ ಜಿ. ಭಟ್, ಚಂದ್ರಿಕಾ ಡಿ. ರಾವ್ ಇವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸಹಕಾರಿಗಳು ಯಾವ ರೀತಿ ಸದಸ್ಯರಿಗೆ ಸೇವೆ ಕೊಡಬೇಕು – ಸಹಕಾರಿಯ ಜವಾಬ್ದಾರಿ ಬಗ್ಗೆ ಸದಸ್ಯರ ಜವಾಬ್ದಾರಿ ಅಭಿವೃದ್ಧಿ ಬಗ್ಗೆ ಅಗತ್ಯ ಮಾಹಿತಿ ನೀಡಿದರು. ಸದಸ್ಯರ ಮಕ್ಕಳಿಗೆ ಪುಸ್ತಕ – ಪೆನ್ – ಕಂಪಾಸ್ ಬಾಕ್ಸ್ ವಿತರಣೆ ಅಗತ್ಯದ ಅಕ್ಕಿ ವಿತರಣೆ ವೈದ್ಯಕೀಯ ನೆರವು – ಜ್ಯೋತಿ ಕೆ.ಎಂ.ಸಿ ವತಿಯಿಂದ ಬಿ.ಪಿ, ಶುಗರ್–ಶಿಬಿರದ ಮಾಹಿತಿ–ಉಚಿತ ಶಿಬಿರ ನಡೆಯಿತು. ಸದಸ್ಯರಿಗೆ ನೆನಪಿನ ಕಾಣಿಕೆ ವಿತರಿಸಿ ಸಹಕಾರಿಯ ಪ್ರಗತಿ ಪರ ಪ್ರಮುಖ ಕಾರ್ಯಕ್ರಮದ ಬಗ್ಗೆ ಭಾರತಿ ಜಿ. ಭಟ್ ರವರು ಮೆಚ್ಚುಗೆ ವ್ಯಕ್ತಪಡಿಸಿದರು



ಕೊಪ್ಪಳ : ದಿನಾಂಕ 15–10–2026 ರಂದು ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳು ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ,. ತಳುವಗೇರಾ ಇದರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶರಾದ ಶ್ರೀ ಜಿ. ಶ್ರೀಧರ್‌ರವರು ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರ್ ಧರಣಿ ಹಾಗೂ ಕೋಟೆಪ್ಪ.ಕೆ ರವರು ಉಪಸ್ಥಿತರಿದ್ದರು. ಜಿಲ್ಲಾ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರವರಿಗೆ ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.

ಹರಿದು ಹಂಚಿ ಹೋದ ಕನ್ನಡ ಪ್ರದೇಶ ಪೂರ್ಣವಾಗಿ ಒಂದುಗೂಡಿಸಿದ ದಿನವೇ ಕರ್ನಾಟಕ ರಾಜ್ಯೋತ್ಸವ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಹಿರಿಯ ಅಧಿಕಾರಿ, ಶಾಸನಾತ್ಮಕ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಕರ್ನಾಟಕದ ಇತಿಹಾಸವೆಂದರೆ ಸಾವಿರಾರು ವರ್ಷಗಳ ನಾಗರೀಕತೆ, ಭಾಷಾ ಬೆಳವಣಿಗೆ, ಸಾಹಿತ್ಯದ ಶ್ರೀಮಂತಿಕೆ, ಕಲೆ–ವಾಸ್ತುಶಿಲ್ಪದ ವೈಭವ ಹಾಗೂ ಸಾಮಾಜಿಕ ಪರಿವರ್ತನೆಯ ಸುದೀರ್ಘ ಕಥನ. ಭಾರತದ ದಕ್ಷಿಣ ಭಾಗದಲ್ಲಿ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಗುರುತನ್ನು ರೂಪಿಸಿಕೊಂಡಿರುವ ಕರ್ನಾಟಕವು ಪ್ರಾಚೀನ ಕಾಲದಿಂದಲೂ ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಮತ್ತು ಆರ್ಥಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ಬೆಳೆದಿದೆ. ಕನ್ನಡ ಭಾಷೆ ಮತ್ತು ಕನ್ನಡಿಗರ ಬದುಕಿನೊಂದಿಗೆ ಬೆಸೆದುಕೊಂಡಿರುವ ಈ ಕರ್ನಾಟಕದಲ್ಲಿ ಕದಂಬರು, ಪಶ್ಚಿಮ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ ಮತ್ತು ಮೈಸೂರು ಅರಸರ ಆಡಳಿತಗಳು ಮಹತ್ವದ ಸ್ಥಾನ ಪಡೆದಿವೆ. ಬನವಾಸಿಯನ್ನು ಕೇಂದ್ರವಾಗಿಸಿಕೊಂಡ ಕದಂಬರು ಕನ್ನಡದ ಪ್ರಾಚೀನ ಆಡಳಿತಾತ್ಮಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಾದಾಮಿ ಚಾಲುಕ್ಯರು ನಿರ್ಮಿಸಿದ ದೇವಾಲಯಗಳು, ರಾಷ್ಟ್ರಕೂಟರ ಕಾಲದ ಸಾಹಿತ್ಯ ಮತ್ತು ವಾಸ್ತುಶಿಲ್ಪ, ಹೊಯ್ಸಳರ ಸೂಕ್ಷ್ಮ ಶಿಲ್ಪಕಲೆ ಹಾಗೂ ವಿಜಯನಗರ ಸಾಮ್ರಾಜ್ಯದ ವೈಭವ ಕರ್ನಾಟಕದ ಇತಿಹಾಸಕ್ಕೆ ಅಪಾರ ಗೌರವ ತಂದುಕೊಟ್ಟಿವೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಪ್ರದೇಶಗಳು ಒಂದೇ ಆಡಳಿತ ಘಟಕವಾಗಿರಲಿಲ್ಲ. ಕೆಲವು ಪ್ರದೇಶಗಳು ನೇರವಾಗಿ ಬ್ರಿಟಿಷರ ಆಡಳಿತದಲ್ಲಿದ್ದ ಬೆಳಗಾವಿ, ಧಾರವಾಡ, ವಿಜಯಪೂರ ಬಾಂಬೆ ಪ್ರಾಂತ ಮತ್ತು ಬೆಂಗಳೂರು ಸುತ್ತಮುತ್ತ ಪ್ರದೇಶ, ಶಿವಮೊಗ್ಗ, ತುಮಕೂರ ಸೇರಿದಂತೆ ಹಲವು ಪ್ರದೇಶ ಮದ್ರಾಸ್ ಪ್ರಾಂತ್ಯಗಳಿಗೆ ಸೇರಿದ್ದವು. ಮತ್ತಷ್ಟು ಪ್ರದೇಶಗಳಾದ ಬೀದರ ಕಲಬುರಗಿ, ರಾಯಚೂರು, ಬಳ್ಳಾರಿ, ಕೊಪ್ಪಳ, ಹೈದರಾಬಾದ್ ಸಂಸ್ಥಾನದ ಅಡಿಯಲ್ಲಿ ಇದ್ದವು. ಮೈಸೂರು ಸಂಸ್ಥಾನವು ಪ್ರತ್ಯೇಕ ಸಂಸ್ಥಾನವಾಗಿ ಆಡಳಿತ ನಡೆಸುತ್ತಿತ್ತು. ಕೊಡಗು ಕೂಡ ಪ್ರತ್ಯೇಕ ಆಡಳಿತ ಘಟಕವಾಗಿತ್ತು. ಈ ವ್ಯವಸ್ಥೆಗಳು ಐತಿಹಾಸಿಕ ಬೆಳವಣಿಗೆಗಳು, ಬ್ರಿಟಿಷರ ರಾಜಕೀಯ ಒಪ್ಪಂದಗಳು ಮತ್ತು ಆಡಳಿತಾತ್ಮಕ ಪುನರ್‌ವ್ಯವಸ್ಥೆಗಳ ಪರಿಣಾಮವಾಗಿ ರೂಪುಗೊಂಡಿದ್ದವು. ಹೀಗಾಗಿ ಒಂದೇ ಭಾಷೆ ಮಾತನಾಡುವ ಜನರು ಬೇರೆ ಬೇರೆ ಆಡಳಿತ ವ್ಯವಸ್ಥೆಗಳಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಕನ್ನಡ ಭಾಷಿಕರು ಒಂದೇ ಆಡಳಿತದಡಿ ಇರದೆ, ವಿವಿಧ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರಾಗಿಯೂ ಬದುಕಬೇಕಾಯಿತು. ಕೆಲವು ಪ್ರದೇಶಗಳಲ್ಲಿ ಕನ್ನಡ ಶಿಕ್ಷಣ ಮತ್ತು ಭಾಷೆಯ ಬಳಕೆಗೆ ಸಂಬಂಧಿಸಿದ ಸಮಸ್ಯೆಗಳು ಎದುರಾದವು. ಈ ಪರಿಸ್ಥಿತಿ ಕನ್ನಡಿಗರಲ್ಲಿ ಕನ್ನಡ ಭಾಷೆ ಮತ್ತು ಸಾಂಸ್ಕೃತಿಕ ಪರಂಪರೆ ಅವರನ್ನು ಒಂದಾಗಿಸುತ್ತಿದ್ದವು. ಸಾಹಿತ್ಯ, ಜನಪದ ಗೀತೆಗಳು, ಧಾರ್ಮಿಕ ಚಳವಳಿಗಳು, ವ್ಯಾಪಾರ ಸಂಪರ್ಕಗಳು ಮತ್ತು ಸಾಮಾಜಿಕ ಸಂಪ್ರದಾಯಗಳ ಮೂಲಕ ಕನ್ನಡದ ಸಾಮಾನ್ಯ ಗುರುತು ಜೀವಂತವಾಗಿತ್ತು. ವಚನ ಚಳವಳಿ, ದಾಸ ಸಾಹಿತ್ಯ ಮತ್ತು ವಿವಿಧ ಸಾಹಿತ್ಯ ಪರಂಪರೆಗಳು ಕನ್ನಡಿಗರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಮೇಲೆ ಆಳವಾದ ಪ್ರಭಾವ ಬೀರಿದ್ದವು. ಕನ್ನಡದ ಪ್ರಾಚೀನ ಸಾಹಿತ್ಯದಿಂದ ಆಧುನಿಕ ಸಾಹಿತ್ಯದವರೆಗೆ ಹರಿದುಬಂದ ಭಾಷಾ ಪರಂಪರೆ, ಕನ್ನಡಿಗರಲ್ಲಿ ನಾಡಿನ ಬಗ್ಗೆ ಅಭಿಮಾನ ಮೂಡಿಸಲು ನೆರವಾಯಿತು.

ಈ ಸಾಂಸ್ಕೃತಿಕ ಸಂಬಂಧಗಳೇ ಮುಂದಿನ ದಿನಗಳಲ್ಲಿ ಕನ್ನಡ ಭಾಷಿಕ ಪ್ರದೇಶಗಳನ್ನು ಒಂದಾಗಿಸಬೇಕೆಂಬ ಏಕೀಕರಣದ ಆಶಯಕ್ಕೆ ಬಲವಾದ ನೆಲೆಯಾದವು. ಇದರಿಂದಾಗಿ ಏಕೀಕೃತ ರಾಜ್ಯದ ಅಗತ್ಯದ ಅರಿವನ್ನು ಹೆಚ್ಚಿಸಿತು.

ಏಕೀಕರಣದ ಕಿಚ್ಚು

19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆರಂಭದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಿಗರ ಹಕ್ಕುಗಳ ಕುರಿತು ಜನಜಾಗೃತಿ ಹೆಚ್ಚಾಯಿತು. ಧಾರವಾಡದಲ್ಲಿ 1890ರಲ್ಲಿ ಆರ್.ಎಚ್. ದೇಶಪಾಂಡೆಯವರ ನೇತೃತ್ವದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾಯಿತು. ಕನ್ನಡ ಭಾಷೆಯ ಬೆಳವಣಿಗೆ, ಕನ್ನಡಿಗರಲ್ಲಿ ಭಾಷಾಭಿಮಾನ ಮತ್ತು ಸಾಂಸ್ಕೃತಿಕ ಜಾಗೃತಿ ಮೂಡಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಕನ್ನಡ ಭಾಷೆಗೆ ಆಡಳಿತ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸೂಕ್ತ ಸ್ಥಾನಮಾನ ದೊರೆಯಬೇಕೆಂಬ ಆಶಯಕ್ಕೆ ಈ ಸಂಘವು ಬಲವಾದ ವೇದಿಕೆಯಾಯಿತು.

1924ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಅಧಿವೇಶನ ನಡೆಯಿತು. ಮಹಾತ್ಮ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಈ ಅಧಿವೇಶನವು ಭಾರತೀಯ ಸ್ವಾತಂತ್ರ್ಯ ಚಳವಳಿಯ

ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಇದೇ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ಆಶಯಕ್ಕೂ ಪ್ರಮುಖ ವೇದಿಕೆ ದೊರೆಯಿತು. ಹುಯಿಲಗೋಳ ನಾರಾಯಣರಾವ್ ರಚಿಸಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಕನ್ನಡಿಗರಲ್ಲಿ ನಾಡಿನ ಒಗ್ಗಟ್ಟಿನ ಭಾವನೆಯನ್ನು ಮೂಡಿಸಿತು. ಏಕೀಕರಣದ ವಿಚಾರವನ್ನು ಸಾರ್ವಜನಿಕ ಚರ್ಚೆಗೆ ತರುವಲ್ಲಿ ಬೆಳಗಾವಿಯ ಈ ಐತಿಹಾಸಿಕ ಸಂದರ್ಭ ಮಹತ್ವದ ತಿರುವಾಯಿತು.

ಏಕೀಕರಣದ ಬೇಡಿಕೆಗೆ ಜನರ ಬೆಂಬಲವನ್ನು ಸಂಘಟಿಸಲು ವಿವಿಧ ಕಾರ್ಯಕರ್ತರು ಪ್ರಯತ್ನಿಸಿದರು. ಕರ್ನಾಟಕದ ಏಕೀಕರಣಕ್ಕೆ ಬೆಂಬಲ ಸೂಚಿಸುವ ಸಹಿ ಸಂಗ್ರಹ ಅಭಿಯಾನಗಳಂತಹ ಚಟುವಟಿಕೆಗಳು ನಡೆದವು. ಇವುಗಳಿಂದ ಏಕೀಕರಣದ ಹೋರಾಟವು ಕೆಲವೇ ನಾಯಕರ ಚಿಂತನೆಯಾಗಿ ಉಳಿಯದೆ, ಜನರ ಆಶಯವಾಗಿ ಬೆಳೆಯತೊಡಗಿತು. ಸ್ವಾತಂತ್ರ್ಯ ದೊರೆಯುವ ಮುನ್ನವೇ ಕನ್ನಡ ಭಾಷಿಕ ಪ್ರದೇಶಗಳನ್ನು ಒಂದಾಗಿಸುವ ಬೇಡಿಕೆಯನ್ನು ಮತ್ತಷ್ಟು ಬಲಪಡಿಸಲು 1946 ರಲ್ಲಿ ಅಖಿಲ ಕರ್ನಾಟಕ ಮಟ್ಟದ ಸಭೆಗಳು ಮತ್ತು ಸಮ್ಮೇಳನಗಳು ನಡೆದವು. ವಿವಿಧ ಪ್ರದೇಶಗಳ ನಾಯಕರು, ಸಂಘಟಕರು ಮತ್ತು ಸಾರ್ವಜನಿಕ ಪ್ರತಿನಿಧಿಗಳು ಏಕೀಕರಣದ ಅಗತ್ಯದ ಕುರಿತು ಚರ್ಚಿಸಿದರು.

ಭಾರತ ಸ್ವತಂತ್ರವಾದ ನಂತರ ಭಾಷಾವಾರು ರಾಜ್ಯಗಳ ರಚನೆಗೆ ಅವಕಾಶ ದೊರೆಯಬಹುದು ಎಂಬ ನಿರೀಕ್ಷೆ ಕನ್ನಡಿಗರಲ್ಲಿ ಬಲವಾಯಿತು. ಏಕೀಕರಣದ ಹೋರಾಟವು ಸ್ವಾತಂತ್ರ್ಯ ಚಳವಳಿಯೊಂದಿಗೆ ನಿಕಟವಾಗಿ ಬೆಸೆದುಕೊಂಡಿತು.

ನವೆಂಬರ್ 1, 1956: ಕನ್ನಡಿಗರ ಕನಸು ನನಸಾದ ದಿನ

1956ರ ನವೆಂಬರ್ 1ರಂದು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಆಗಿನ ಮೈಸೂರು ರಾಜ್ಯದೊಂದಿಗೆ ಬಾಂಬೆ ಮತ್ತು ಮದ್ರಾಸ್ ಪ್ರಾಂತ್ಯಗಳ ಕನ್ನಡ ಭಾಷಿಕ ಪ್ರದೇಶಗಳು, ಹೈದರಾಬಾದ್ ರಾಜ್ಯದ ಕನ್ನಡ ಪ್ರದೇಶಗಳು ಹಾಗೂ ಕೊಡಗು ಸೇರಿದಂತೆ ಹಲವು ಪ್ರದೇಶಗಳನ್ನು ಹೊಸ ರಾಜ್ಯದಲ್ಲಿ ಸೇರಿಸಲಾಯಿತು. ಆದರೆ ಕನ್ನಡ ಪ್ರದೇಶಗಳಾದ ಕಾಸರಗೋಡು ತಾಳವಾಡಿ, ಅಕ್ಕಲಕೋಟ ಸೇರಿದಂತೆ ಹಲವು ಪ್ರಮುಖ ಪ್ರದೇಶಗಳು ಸೇರದೆ ಬೇರೆ ರಾಜ್ಯಗಳ ಪಾಲಾದವು ಆದರು ಇದು ದೀರ್ಘಕಾಲದ ಏಕೀಕರಣ ಚಳವಳಿಯ ಮಹತ್ವದ ಫಲಿತಾಂಶವಾಗಿತ್ತು. ಹಲವು ಆಡಳಿತ ವ್ಯವಸ್ಥೆಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರಿಗೆ ಒಂದೇ ರಾಜ್ಯದ ಅಡಿಯಲ್ಲಿ ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಸಾಮಾಜಿಕ ಆಶಯಗಳನ್ನು ಬೆಳೆಸಿಕೊಳ್ಳಲು ಹೊಸ ಅವಕಾಶ ದೊರೆಯಿತು.

ಕರ್ನಾಟಕದ ನಾಮಕರಣ

1956ರಲ್ಲಿ ರಚನೆಯಾದ ರಾಜ್ಯವು ಮೈಸೂರು ರಾಜ್ಯವೆಂದು ಕರೆಯಲ್ಪಟ್ಟಿತು. ಆದರೆ ವಿಶಾಲ ಕನ್ನಡನಾಡಿನ ಎಲ್ಲ ಪ್ರದೇಶಗಳನ್ನೂ ಪ್ರತಿನಿಧಿಸುವ 'ಕರ್ನಾಟಕ' ಎಂಬ ಹೆಸರಿನ ಬೇಡಿಕೆ ಬಲಗೊಂಡಿತು. ಅಂತಿಮವಾಗಿ 1973ರ ನವೆಂಬರ್ 1ರಂದು ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಇದು ಕನ್ನಡಿಗರ ಸಾಮೂಹಿಕ ಗುರುತಿಗೆ ಮತ್ತಷ್ಟು ಬಲ ನೀಡಿದ ಮಹತ್ವದ ಘಟನೆಯಾಯಿತು. ಇಂದಿನ ಕರ್ನಾಟಕವು ವಿವಿಧ ಪ್ರಾದೇಶಿಕ ಸಂಸ್ಕೃತಿಗಳು, ಭಾಷಾ ರೂಪಗಳು, ಜನಪದ ಪರಂಪರೆಗಳು ಮತ್ತು ಐತಿಹಾಸಿಕ ಅನುಭವಗಳನ್ನು ಒಳಗೊಂಡ ವಿಶಾಲ ರಾಜ್ಯವಾಗಿದೆ. ಕರಾವಳಿ, ಮಲೆನಾಡು, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವೈವಿಧ್ಯವು ರಾಜ್ಯದ ಸಾಂಸ್ಕೃತಿಕ ಸಂಪತ್ತಾಗಿದೆ.

ರಾಜ್ಯೋತ್ಸವದ ನಿಜವಾದ ಮಹತ್ವ

ಕರ್ನಾಟಕ ರಾಜ್ಯೋತ್ಸವವು ಕೇವಲ ಧ್ವಜಾರೋಹಣ, ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಿಹಿ ಹಂಚಿಕೆಗೆ ಸೀಮಿತವಾದ ಹಬ್ಬವಲ್ಲ. ಇದು ಕನ್ನಡಿಗರ ಒಗ್ಗಟ್ಟು, ಭಾಷಾಭಿಮಾನ, ಸಾಂಸ್ಕೃತಿಕ ಆತ್ಮಗೌರವ ಮತ್ತು ಪ್ರಜಾಸತ್ತಾತ್ಮಕ ಆಶಯಗಳ ಸಂಕೇತವಾಗಿದೆ. ಏಕೀಕರಣಕ್ಕಾಗಿ ಶ್ರಮಿಸಿದ ಮಹನೀಯರ ತ್ಯಾಗವನ್ನು ಸ್ಮರಿಸುವುದರ ಜೊತೆಗೆ, ಅವರು ಕಂಡ ಸಮಗ್ರ ಅಭಿವೃದ್ಧಿಯ ಕರ್ನಾಟಕವನ್ನು ನಿರ್ಮಿಸುವ ಜವಾಬ್ದಾರಿಯನ್ನು ನಮಗೆ ನೆನಪಿಸುತ್ತದೆ. ರಾಜ್ಯೋತ್ಸವದ ಆಚರಣೆಯು ಕನ್ನಡ ಭಾಷೆಯ ರಕ್ಷಣೆ, ಸಾಹಿತ್ಯದ ಪ್ರೋತ್ಸಾಹ, ಜನಪದ ಕಲೆಗಳ ಸಂರಕ್ಷಣೆ, ಐತಿಹಾಸಿಕ ಸ್ಮಾರಕಗಳ ಕಾಳಜಿ ಮತ್ತು ಸ್ಥಳೀಯ ಪರಂಪರೆಯ ಮುಂದುವರಿಕೆಗೆ ಪ್ರೇರಣೆಯಾಗಬೇಕು. ಶಾಲಾ–ಕಾಲೇಜುಗಳಲ್ಲಿ ನಾಡಿನ ಇತಿಹಾಸವನ್ನು ಪರಿಚಯಿಸುವುದು, ಯುವಜನರಲ್ಲಿ ಕನ್ನಡ ಓದುವ ಅಭ್ಯಾಸ ಬೆಳೆಸುವುದು ಮತ್ತು ಕನ್ನಡದ ಡಿಜಿಟಲ್ ಬಳಕೆಯನ್ನು ವಿಸ್ತರಿಸುವುದು ರಾಜ್ಯೋತ್ಸವದ ಆಶಯಕ್ಕೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ರಾಜ್ಯೋತ್ಸವದಂದು ಈ ಇತಿಹಾಸವನ್ನು ಸ್ಮರಿಸುವುದು ಕೇವಲ ಗತಕಾಲದ ಹೆಮ್ಮೆಯನ್ನು ಆಚರಿಸುವುದಲ್ಲ. ನಾಡಿನ ಏಕತೆ, ಭಾಷೆಯ ಬೆಳವಣಿಗೆ, ಪ್ರಾದೇಶಿಕ ಸಮಾನತೆ ಮತ್ತು ಜನರ ಕಲ್ಯಾಣಕ್ಕಾಗಿ ಮುಂದುವರಿಯುವ ಸಂಕಲ್ಪವನ್ನು ಕೈಗೊಳ್ಳುವುದಾಗಿದೆ.

ಜೈ ಕರ್ನಾಟಕ! ಜೈ ಕನ್ನಡಾಂಬೆ!

ಭಾರತ್ ಮಂಟಪದಲ್ಲಿ ಇಂಡಿಯನ್ ಕೋಆಪರೇಣಿವ್ ಶೃಂಗಸಭೆ

(2026ರ ಇಂಡಿಯನ್ ಕೋಆಪರೇಟಿವ್ ಶೃಂಗಸಭೆ ಮತ್ತು ಶ್ರೇಷ್ಠತಾ ಪ್ರಶಸ್ತಿಗಳನ್ನು ನವೆಂಬರ್ 19, 2026ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಲಿದೆ. ದೇಶದ ವಿವಿಧ ಭಾಗಗಳಿಂದ 300ಕ್ಕೂ ಹೆಚ್ಚು ಹಿರಿಯ ಸಹಕಾರಿ ನಾಯಕರು, ನೀತಿ ನಿರೂಪಕರು ಹಾಗೂ ಸಹಕಾರಿ ಕ್ಷೇತ್ರದ ಪ್ರಮುಖ ಪಾಲುದಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆ)

– ಶ್ರೀಮತಿ ಕವಿತ ಆರ್. ಅಧಿಕಾರಿ, ಕ.ರಾ.ಸೌ.ಸಂ.ಸ. ನಿ., ಬೆಂಗಳೂರು

ಇಂಡಿಯನ್ ಕೋಆಪರೇಟಿವ್ ಅನ್ನು 15 ವರ್ಷಗಳ ಹಿಂದೆ ಪ್ರಾರಂಭಿಸಿದಾಗ, ಅದು ಒಂದು ಕಾರ್ಯಸಾಧ್ಯವಾದ ಹಾಗೂ ಯಶಸ್ವಿ ಪ್ರಯತ್ನವಾಗಿ ಹೊರಹೊಮ್ಮುತ್ತದೆ ಎಂದು ಕೆಲವೇ ಮಂದಿ ನಂಬಿದ್ದರು. ಸಹಕಾರಿ ಕ್ಷೇತ್ರವು ಮಾಧ್ಯಮಗಳ ಗಮನ ಸೆಳೆಯಲು ಹಿಂದೇಟು ಹಾಕುತ್ತಿತ್ತು. ಮತ್ತೊಂದೆಡೆ, ಮುಖ್ಯವಾಹಿನಿಯ ಮಾಧ್ಯಮಗಳು ಸಹಕಾರಿ ಕ್ಷೇತ್ರವನ್ನು ಹೆಚ್ಚಿನ ಮಹತ್ವವಿಲ್ಲದ ಕ್ಷೇತ್ರವೆಂದು ಪರಿಗಣಿಸಿ, ಅದರ ಬಗ್ಗೆ ಬಹುತೇಕ ಗಮನ ಹರಿಸುತ್ತಿರಲಿಲ್ಲ. ಆದರೆ, ಇತರರು ಗುರುತಿಸಲು ವಿಫಲರಾದಂತಹ ಒಂದು ಮಹತ್ವದ ಸಾಧ್ಯತೆಯನ್ನು ಇಂಡಿಯನ್ ಕೋಆಪರೇಟಿವ್ ತಂಡವು ಅಂದೇ ಗುರುತಿಸಿತ್ತು – ಜನರನ್ನು ಸಂಘಟಿಸುವುದು, ಸಮುದಾಯಗಳನ್ನು ಸಬಲಗೊಳಿಸುವುದು ಹಾಗೂ ಆರ್ಥಿಕ ಬೆಳವಣಿಗೆಗೆ ವೇಗ ನೀಡುವಲ್ಲಿ ಸಹಕಾರಿಗಳಲ್ಲಿರುವ ಅಪಾರ ಸಾಮರ್ಥ್ಯ.

ಇಂದು ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಹಾಗೂ ಕೇಂದ್ರ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರ ನೇತೃತ್ವದಲ್ಲಿ ಸಹಕಾರ ಕ್ಷೇತ್ರಕ್ಕೆ ದೊರೆಯುತ್ತಿರುವ ರಾಷ್ಟ್ರೀಯ ಮಟ್ಟದ ಗಮನ ಬಹಳ ಹಿಂದೆಯೇ ಈ ಸಾಮರ್ಥ್ಯವನ್ನು ನಾವು ಗುರುತಿಸಿದ್ದೆವು. ಆ ದೃಢ ನಂಬಿಕೆಯೊಂದಿಗೆ, ಅನೇಕ ಸವಾಲುಗಳು ಮತ್ತು ಅಡೆತಡೆಗಳನ್ನು ಎದುರಿಸುತ್ತಾ ನಾವು ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

ಸಹಕಾರಿಗಳು ಕೇವಲ ವ್ಯವಹಾರ ನಡೆಸುವ ಸಂಸ್ಥೆಗಳಲ್ಲ; ಅವು ಜನರನ್ನು ಒಗ್ಗೂಡಿಸುವ, ಅವರ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವ ಮತ್ತು ತಳಮಟ್ಟದಿಂದ ಸಮೃದ್ಧಿಯನ್ನು ನಿರ್ಮಿಸುವ ಶಕ್ತಿಶಾಲಿ ಸಾಧನಗಳಾಗಿವೆ ಎಂಬ ದೃಢ ನಂಬಿಕೆ ನಮ್ಮಲ್ಲಿತ್ತು.

ಈ ಹಿನ್ನೆಲೆಯಲ್ಲಿ, ಇಂಡಿಯನ್ ಕೋಆಪರೇಟಿವ್ ಸಂಸ್ಥೆಯು 2026ರ ಇಂಡಿಯನ್ ಕೋಆಪರೇಟಿವ್ ಶೃಂಗಸಭೆ ಮತ್ತು ಶ್ರೇಷ್ಠತಾ ಪ್ರಶಸ್ತಿಗಳನ್ನು ನವೆಂಬರ್ 19, 2026ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಲಿದೆ. ದೇಶದ ವಿವಿಧ ಭಾಗಗಳಿಂದ 300ಕ್ಕೂ ಹೆಚ್ಚು ಹಿರಿಯ ಸಹಕಾರಿ ನಾಯಕರು, ನೀತಿ ನಿರೂಪಕರು ಹಾಗೂ ಸಹಕಾರಿ ಕ್ಷೇತ್ರದ ಪ್ರಮುಖ ಪಾಲುದಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಈ ರಾಷ್ಟ್ರೀಯ ಮಟ್ಟದ ಸಮಾವೇಶವು ಸಹಕಾರಿ ಚಳವಳಿಯ ಬೆಳವಣಿಗೆಗಳನ್ನು ವರದಿ ಮಾಡುವ ಮತ್ತು ಅವುಗಳನ್ನು ಜನರಿಗೆ ಪರಿಚಯಿಸುವಲ್ಲಿ ಇಂಡಿಯನ್ ಕೋಆಪರೇಟಿವ್‌ನ 15 ವರ್ಷಗಳ ಪಯಣದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಲಿದೆ. ಸಹಕಾರಿ ಕ್ಷೇತ್ರದ ನಾಯಕರು ಪರಸ್ಪರ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು, ಉದಯೋನ್ಮುಖ ಸವಾಲುಗಳ ಕುರಿತು ಚರ್ಚಿಸಲು ಹಾಗೂ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸುವ ಅವಕಾಶಗಳನ್ನು ಅನ್ವೇಷಿಸಲು ಈ ಶೃಂಗಸಭೆಯು ಸಾಮಾನ್ಯ ವೇದಿಕೆಯನ್ನು ಒದಗಿಸುವ ಉದ್ದೇಶ ಹೊಂದಿದೆ.

ಕೇಂದ್ರ ಸಹಕಾರ ಸಚಿವಾಲಯದ ಪ್ರತಿನಿಧಿಗಳು, ರಾಷ್ಟ್ರೀಯ ಮಟ್ಟದ ಸಹಕಾರಿ ಒಕ್ಕೂಟಗಳು, ನಗರ ಸಹಕಾರಿ ಬ್ಯಾಂಕುಗಳು (UCBs), ರಾಜ್ಯ ಸಹಕಾರಿ ಬ್ಯಾಂಕುಗಳು (StCBs), ಬಹುರಾಜ್ಯ ಸಹಕಾರಿ ಸಂಘಗಳು ಹಾಗೂ ಇತರ ಪ್ರಮುಖ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಭಾರತದ ಆರ್ಥಿಕ ಹಾಗೂ ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತಿರುವ ಸಂದರ್ಭದಲ್ಲಿ, ಈ ಸಮಾವೇಶವು ಕ್ಷೇತ್ರದ ಪ್ರಮುಖ ಧ್ವನಿಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಿದೆ.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ಇಂಡಿಯನ್ ಕೋಆಪರೇಟಿವ್ "ಎಕ್ಸಲೆನ್ಸ್ ಅವಾರ್ಡ್ಸ್ 2026" ಮೂಲಕ ಅತ್ಯುತ್ತಮ ಸಾಧನೆ ಮಾಡಿರುವ ಸಹಕಾರಿ ಸಂಸ್ಥೆಗಳನ್ನು ಗುರುತಿಸಿ ಗೌರವಿಸಲಾಗುವುದು. ಸಂಸ್ಥೆಗಳ ಕಾರ್ಯಕ್ಷಮತೆ, ಸಾಂಸ್ಥಿಕ ಬೆಳವಣಿಗೆ, ಉತ್ತಮ ಆಡಳಿತ, ನವೀನತೆ ಹಾಗೂ ಸಹಕಾರಿ ಚಳವಳಿಗೆ ನೀಡಿರುವ ಕೊಡುಗೆ ಸೇರಿದಂತೆ ವಿವಿಧ ಮಾನದಂಡಗಳ ಆಧಾರದ ಮೇಲೆ ಪ್ರಶಸ್ತಿಗಳನ್ನು ನೀಡಲಾಗುವುದು. ನಗರ ಸಹಕಾರಿ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಬಹುರಾಜ್ಯ ಸಹಕಾರಿ ಸಂಘಗಳು ಸೇರಿದಂತೆ ಪ್ರಮುಖ ವಿಭಾಗಗಳನ್ನು ಪ್ರಶಸ್ತಿಗಳು ಒಳಗೊಂಡಿರುತ್ತವೆ.

ಶೃಂಗಸಭೆಯ ಮತ್ತೊಂದು ಪ್ರಮುಖ ಭಾಗವಾಗಿ ಭಾರತ್ ಮಂಟಪದಲ್ಲಿ ಪ್ರದರ್ಶನ ವೇದಿಕೆ ಸಹ ಆಯೋಜಿಸಲಾಗುತ್ತದೆ. ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ತಂತ್ರಜ್ಞಾನ, ಫಿನ್‌ಟೆಕ್ ಹಾಗೂ ಐಟಿ ಕ್ಷೇತ್ರದ ಕಂಪನಿಗಳಿಗೆ ತಮ್ಮ ಉತ್ಪನ್ನಗಳು ಮತ್ತು ಪರಿಹಾರಗಳನ್ನು ಪ್ರದರ್ಶಿಸಲು ಇದು ಉತ್ತಮ ಅವಕಾಶವನ್ನು ಒದಗಿಸಲಿದೆ. Sudhan Gold ಮತ್ತು KGreen Consulting & Technologies India Pvt. Ltd. ಈಗಾಗಲೇ ಪ್ರದರ್ಶನ ಪಾಲುದಾರರಾಗಿ ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡಿದ್ದು, ಇನ್ನೂ ಹೆಚ್ಚಿನ ಸಂಸ್ಥೆಗಳು ಈ ವೇದಿಕೆಗೆ ಸೇರುವ ನಿರೀಕ್ಷೆಯಿದೆ.

ಇಂಡಿಯನ್ ಕೋಆಪರೇಟಿವ್ ಸಂಸ್ಥೆಗೆ ಈ ಶೃಂಗಸಭೆಯು ತನ್ನ 15 ವರ್ಷಗಳ ಪಯಣದಲ್ಲಿ ಬೆಂಬಲವಾಗಿ ನಿಂತ ಎಲ್ಲರನ್ನೂ ಸ್ಮರಿಸುವ ಮತ್ತು ಸಹಕಾರಿ ಚಳವಳಿಯ ಸಾಮರ್ಥ್ಯವನ್ನು ನೈಜ ಸಾಧನೆಗಳಾಗಿ ಪರಿವರ್ತಿಸಲು ಸಹಕರಿಸಿದ ಸಂಸ್ಥೆಗಳನ್ನು ಗುರುತಿಸುವ ಒಂದು ಮಹತ್ವದ ಸಂದರ್ಭವೂ ಆಗಿದೆ.

ಈ ಶೃಂಗಸಭೆ ಮತ್ತು ಪ್ರಶಸ್ತಿಗಳು ಸಾಂಸ್ಥಿಕ ಶ್ರೇಷ್ಠತೆಯನ್ನು ಆಚರಿಸುವುದು, ಆರೋಗ್ಯಕರ ಸ್ಪರ್ಧೆಯನ್ನು ಉತ್ತೇಜಿಸುವುದು ಹಾಗೂ ಸಹಕಾರಿ ಚಳವಳಿಯ ವಿವಿಧ ಅಂಗಗಳ ನಡುವೆ ಹೆಚ್ಚಿನ ಸಹಕಾರ ಮತ್ತು ಸಹಭಾಗಿತ್ವವನ್ನು ಬೆಳೆಸುವುದು ಎಂಬ ಉದ್ದೇಶವನ್ನು ಹೊಂದಿವೆ.

Indian Cooperative Summit at Bharat Mandapam - on November 19, 2026

When Indian Cooperative was launched 15 years ago, few believed it would prove to be a viable venture. The cooperative sector was reluctant to seek media exposure, while mainstream media largely ignored it, considering it of little significance. Yet, the Indian Cooperative team saw what many others failed to recognise: the enormous potential of cooperatives to organise people, empower communities and drive economic growth.

Today, this potential is receiving recognition at the highest levels of government. The national emphasis on cooperation, reflected in the vision of Sahakar Se Samriddhi, has brought renewed attention to the role cooperatives can play in transforming rural and urban India.

Against this backdrop, Indian Cooperative will organise the Indian Cooperative Summit & Excellence Awards 2026 on November 19 at Bharat Mandapam, New Delhi, bringing together more than 300 senior leaders, policymakers and stakeholders from across the country's cooperative sector.

A major highlight will be the Indian Cooperative Excellence Awards 2026, which will recognise outstanding cooperative institutions for their performance, institutional growth, governance, innovation and contribution to the movement. The awards will cover key segments, including Urban Cooperative Banks, State Cooperative Banks and Multi-State Cooperative Societies.

The Summit will also feature an exhibition platform at Bharat Mandapam, offering technology, fintech and IT companies an opportunity to showcase solutions relevant to cooperative institutions. Sudhan Gold and KGreen Consulting & Technologies India Pvt. Ltd. have already confirmed their participation as Exhibition Partners, with more organisations expected to join.

For Indian Cooperative, the Summit is also an occasion to acknowledge those who supported its journey and recognise institutions that have helped translate the cooperative movement's potential into tangible achievements. Fifteen years ago, the portal backed a sector whose wider significance remained largely unrecognised. Today, the growing national emphasis on cooperation reinforces the conviction with which it began.

The Summit and Awards seek to celebrate institutional excellence, encourage healthy competition and foster greater collaboration across the cooperative movement, while recognising those who will help carry it towards a more prosperous and inclusive future.

ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

ಧಾರವಾಡ : ದಿನಾಂಕ 30.09.2026 ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಸಂಪರ್ಕ ಕಛೇರಿ ಧಾರವಾಡದಲ್ಲಿ ಆಯೋಜಿಸಲಾಗಿತ್ತು.ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆ ಹಾಗೂ ಸಾಮಾನ್ಯ ಸಭೆಯ ಮಾಹಿತಿ ಸಲ್ಲಿಸುವ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ರವರು ಮಾಹಿತಿ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಒಟ್ಟು 17 ಸೌಹಾರ್ದ ಸಹಕಾರಿಗಳಿಂದ 19 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

ಬಾಗಲಕೋಟ: ದಿನಾಂಕ 28.10.2026 ರಂದು ಬಾಗಲಕೋಟ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟ ಇಲ್ಲಿ ಆಯೋಜಿಸಲಾಗಿತ್ತು.ಸದರಿ ತರಬೇತಿ ಕಾರ್ಯಕ್ರಮದಲ್ಲಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು, ಸಾಮಾನ್ಯ ಸಭೆ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಮಾಹಿತಿಯನ್ನು ಶ್ರೀಮತಿ ರೇಷ್ಮಾ ಪಾಟೀಲ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಒಟ್ಟು 26 ಸೌಹಾರ್ದ ಸಹಕಾರಿಗಳಿಂದ 34 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

ದಿನಾಂಕ 28.10.2026ರಂದು ಬೆಂಗಳೂರು ಪ್ರಾಂತದಲ್ಲಿ 2026–2027ನೇ ಸಾಲಿನಲ್ಲಿ ಚುನಾವಣೆ ಜರುಗಬೇಕಾದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಚುನಾವಣಾ ಪ್ರಕ್ರಿಯೆ ಕುರಿತ ಕಾರ್ಯಗಾರವನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಸದರಿ ಕಾರ್ಯಗಾರದಲ್ಲಿ ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಲಿಯಾಕತ್ ಅಲಿ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಚುನಾವಣಾ ಪ್ರಕ್ರಿಯೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು, ಬೆಂಗಳೂರು ವಿಭಾಗದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಅದರಿ ಆನ್‌ಲೈನ್ ಕಾರ್ಯಗಾರದಲ್ಲಿ 140 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿ ಮಾಹಿತಿ ಪಡೆದರು.

ಸಹಕಾರದ ಜ್ಯೋತಿ: ಬೆಳಕಿನಿಂದ ಸಮೃದ್ಧಿಯೆಡೆಗೆ

– ಶ್ರೀಮತಿ ಸವಿತ ಎನ್. ಇ, ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ. ನಿ., ಬೆಂಗಳೂರು

"ಒಂದು ದೀಪ ಮತ್ತೊಂದು ದೀಪವನ್ನು ಬೆಳಗಿಸಿದಾಗ ಬೆಳಕು ಹೆಚ್ಚುತ್ತದೆ; ಒಂದು ಜೀವ ಮತ್ತೊಂದು ಜೀವಕ್ಕೆ ಆಸರೆಯಾದಾಗ ಬದುಕು ಬೆಳಗುತ್ತದೆ. ಇದೇ ದೀಪಾವಳಿಯ ಸಂದೇಶ, ಇದೇ ಸಹಕಾರದ ತತ್ವ." ಭಾರತೀಯ ಸಂಸ್ಕೃತಿಯು ಹಬ್ಬಗಳ ಮೂಲಕ ಬದುಕಿನ ಮೌಲ್ಯಗಳನ್ನು ಪರಿಚಯಿಸುವ ಅಪೂರ್ವ ಪರಂಪರೆಯನ್ನು ಹೊಂದಿದೆ. ಪ್ರತಿಯೊಂದು ಹಬ್ಬವೂ ಕೇವಲ ಆಚರಣೆಯಲ್ಲ; ಅದು ಮಾನವೀಯ ಸಂಬಂಧಗಳನ್ನು ಬೆಸೆಯುವ, ಜೀವನಕ್ಕೆ ಹೊಸ ಭರವಸೆಯನ್ನು ತುಂಬುವ ಮತ್ತು ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ ಒಂದು ಸುಂದರ ಸಂದರ್ಭ. ಅಂತಹ ಹಬ್ಬಗಳಲ್ಲಿ ದೀಪಾವಳಿ ಬೆಳಕಿನ ಹಬ್ಬವಾದರೆ, ಸಹಕಾರವು ಬದುಕನ್ನು ಬೆಳಗಿಸುವ ಜೀವನದರ್ಶನವಾಗಿದೆ. ದೀಪಾವಳಿಯು ಕತ್ತಲೆಯನ್ನು ದೂರ ಮಾಡಿ ಬೆಳಕನ್ನು ಹರಡುವಂತೆ, ಸಹಕಾರವು ವ್ಯಕ್ತಿಯ ಸಂಕಷ್ಟಗಳನ್ನು ದೂರಮಾಡಿ ಸಾಮೂಹಿಕ ಪ್ರಗತಿಯ ಬೆಳಕನ್ನು ಹರಡುತ್ತದೆ.

ದೀಪಾವಳಿ ಮತ್ತು ಸಹಕಾರ ಇವೆರಡೂ ಮೇಲ್ನೋಟಕ್ಕೆ ವಿಭಿನ್ನ ಕ್ಷೇತ್ರಗಳಿಗೆ ಸೇರಿದವುಗಳಂತೆ ಕಂಡರೂ, ಅವುಗಳ ಅಂತರಂಗದ ಆಶಯ ಒಂದೇ ಆಗಿದೆ. ಹಂಚಿಕೊಳ್ಳುವುದು, ಪರಸ್ಪರ ನೆರವಾಗುವುದು, ಒಗ್ಗಟ್ಟಿನಿಂದ ಮುನ್ನಡೆಯುವುದು ಮತ್ತು ಎಲ್ಲರ ಬದುಕಿನಲ್ಲಿಯೂ ಸಂತೋಷದ ಬೆಳಕನ್ನು ಮೂಡಿಸುವುದು ಇವೆರಡರ ಮೂಲತತ್ವವಾಗಿದೆ.

ದೀಪದ ಬೆಳಕಿನಲ್ಲಿ ಸಹಕಾರದ ದರ್ಶನ

ದೀಪಾವಳಿಯ ಸಂದರ್ಭದಲ್ಲಿ ನಾವು ಮಣ್ಣಿನ ಹಣತೆಗಳನ್ನು ಬೆಳಗಿಸುತ್ತೇವೆ. ಒಂದು ಹಣತೆಯಿಂದ ಮತ್ತೊಂದು ಹಣತೆಯನ್ನು ಬೆಳಗಿಸಿದಾಗ ಮೊದಲ ಹಣತೆಯ ಬೆಳಕು ಕಡಿಮೆಯಾಗುವುದಿಲ್ಲ. ಬದಲಾಗಿ, ಸುತ್ತಮುತ್ತಲಿನ ಪ್ರದೇಶವೆಲ್ಲ ಬೆಳಕಿನಿಂದ ಕಂಗೊಳಿಸುತ್ತದೆ. ಈ ಸರಳ ದೃಶ್ಯವೇ ಸಹಕಾರ ತತ್ವದ ಅತ್ಯಂತ ಸುಂದರ ರೂಪಕವಾಗಿದೆ.

ಸಹಕಾರದ ಮೂಲ ಆಶಯವೂ ಇದೇ. ಒಬ್ಬ ವ್ಯಕ್ತಿಯ ಶಕ್ತಿ ಸೀಮಿತವಾಗಿರಬಹುದು; ಆದರೆ ಅನೇಕ ವ್ಯಕ್ತಿಗಳು ಒಂದೇ ಗುರಿಗಾಗಿ ಕೈಜೋಡಿಸಿದಾಗ ದೊಡ್ಡ ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಒಬ್ಬರ ಪರಿಶ್ರಮ ಮತ್ತೊಬ್ಬರಿಗೆ ಪ್ರೇರಣೆಯಾಗುತ್ತದೆ. ಒಬ್ಬರ ಅನುಭವ ಮತ್ತೊಬ್ಬರಿಗೆ ಮಾರ್ಗದರ್ಶನವಾಗುತ್ತದೆ. ಒಬ್ಬರ ನೆರವು ಮತ್ತೊಬ್ಬರ ಬದುಕಿಗೆ ಆಸರೆಯಾಗುತ್ತದೆ. ಹಣತೆಗಳು ಸಾಲಾಗಿ ಬೆಳಗಿದಾಗ ದೀಪಾವಳಿಯ ಸೌಂದರ್ಯ ಹೆಚ್ಚುವಂತೆ, ವ್ಯಕ್ತಿಗಳು ಸಹಕಾರದ ಮನೋಭಾವದಿಂದ ಒಂದಾದಾಗ ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆ. ಆದ್ದರಿಂದ ದೀಪಾವಳಿಯ ಹಣತೆಯನ್ನು ಬೆಳಗಿಸುವ ಪ್ರತಿಯೊಬ್ಬರೂ ತಮ್ಮ ಹೃದಯದಲ್ಲಿಯೂ ಸಹಕಾರದ ಜ್ಯೋತಿಯನ್ನು ಬೆಳಗಿಸಿಕೊಳ್ಳಬೇಕಾಗಿದೆ.

ಸಹಕಾರ – ಸಾಮೂಹಿಕ ಬದುಕಿನ ಬೆಳಕು

ಸಹಕಾರವೆಂದರೆ ಕೇವಲ ಆರ್ಥಿಕ ವ್ಯವಹಾರವಲ್ಲ; ಅದು ಒಂದು ಜೀವನಮೌಲ್ಯ. ಪರಸ್ಪರ ವಿಶ್ವಾಸ, ಸಮಾನತೆ, ಪ್ರಜಾಪ್ರಭುತ್ವ, ಸ್ವಯಂಸಹಾಯ ಮತ್ತು ಸಾಮೂಹಿಕ ಹೊಣೆಗಾರಿಕೆಗಳ ಮೇಲೆ ಸಹಕಾರದ ತತ್ವವು ನಿಂತಿದೆ. ವ್ಯಕ್ತಿಯೊಬ್ಬನು ತನ್ನ ಅಭಿವೃದ್ಧಿಯೊಂದಿಗೆ ಇತರರ ಅಭಿವೃದ್ಧಿಯನ್ನೂ ಬಯಸಿದಾಗ ನಿಜವಾದ ಸಹಕಾರದ ಆಶಯ ಸಾಕಾರಗೊಳ್ಳುತ್ತದೆ.

ಗ್ರಾಮೀಣ ಪ್ರದೇಶದ ರೈತರಿಗೆ ಕೃಷಿ ಸಾಲ ದೊರಕಿಸುವುದರಿಂದ ಹಿಡಿದು ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಕಲ್ಪಿಸುವವರೆಗೆ, ಸಣ್ಣ ವ್ಯಾಪಾರಿಗಳಿಗೆ ನೆರವಾಗುವುದರಿಂದ ಹಿಡಿದು ಸಾಮಾನ್ಯ ಜನರಲ್ಲಿ ಉಳಿತಾಯದ ಮನೋಭಾವ ಬೆಳೆಸುವವರೆಗೆ ಸಹಕಾರಿ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ. ಸಹಕಾರದ ಮೂಲಕ ವ್ಯಕ್ತಿಗಳು ಆರ್ಥಿಕವಾಗಿ ಸಬಲರಾಗುವುದಷ್ಟೇ ಅಲ್ಲ, ತಮ್ಮ ಹಕ್ಕುಗಳು, ಕರ್ತವ್ಯಗಳು ಮತ್ತು ಸಾಮೂಹಿಕ ಶಕ್ತಿಯ ಅರಿವನ್ನೂ ಬೆಳೆಸಿಕೊಳ್ಳುತ್ತಾರೆ.

ದೀಪಾವಳಿಯ ಬೆಳಕು ಎಲ್ಲರ ಮನೆಗಳಿಗೂ ತಲುಪಬೇಕು ಎಂಬ ಆಶಯದಂತೆ, ಸಹಕಾರದ ಫಲವೂ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರು, ಸಣ್ಣ ರೈತರು, ಕಾರ್ಮಿಕರು ಮತ್ತು ದುರ್ಬಲ ವರ್ಗದ ಜನರು ಸಹಕಾರದ ಮೂಲಕ ಸ್ವಾವಲಂಬನೆಯ ಹಾದಿಯಲ್ಲಿ ಮುನ್ನಡೆಯುವಂತಾಗಬೇಕು.

ಸಹಕಾರಿ ಸಂಸ್ಥೆಗಳು – ಸಮೃದ್ಧಿಯ ಹಣತೆಗಳು

ಸಹಕಾರಿ ಸಂಸ್ಥೆಗಳನ್ನು ಸಮಾಜದ ಅಭಿವೃದ್ಧಿಗೆ ಬೆಳಕು ನೀಡುವ ಹಣತೆಗಳಿಗೆ ಹೋಲಿಸಬಹುದು. ಪ್ರತಿಯೊಂದು ಸಹಕಾರಿ ಸಂಸ್ಥೆಯೂ ತನ್ನ ಸದಸ್ಯರ ವಿಶ್ವಾಸದಿಂದ ಆರಂಭವಾಗಿ, ಅವರ ಪಾಲ್ಗೊಳ್ಳುವಿಕೆ ಮತ್ತು ಪರಿಶ್ರಮದಿಂದ ಬೆಳೆಯುತ್ತದೆ. ಸದಸ್ಯರ ಸಣ್ಣ ಉಳಿತಾಯಗಳು ಒಟ್ಟುಗೂಡಿ ದೊಡ್ಡ ಆರ್ಥಿಕ ಶಕ್ತಿಯಾಗುತ್ತವೆ. ವೈಯಕ್ತಿಕ ಪ್ರಯತ್ನಗಳು ಸಾಮೂಹಿಕ ಸಾಧನೆಗಳಾಗಿ ರೂಪುಗೊಳ್ಳುತ್ತವೆ.

ಸಹಕಾರಿ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ಆರ್ಥಿಕ ನೆರವು ನೀಡುತ್ತವೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಗ್ರಾಮೀಣ ಕುಟುಂಬಗಳ ಜೀವನೋಪಾಯಕ್ಕೆ ಬೆಂಬಲವಾಗುತ್ತವೆ. ಮಹಿಳಾ ಸಹಕಾರ ಸಂಘಗಳು ಸ್ವಾವಲಂಬನೆ ಮತ್ತು ನಾಯಕತ್ವಕ್ಕೆ ಅವಕಾಶ ಕಲ್ಪಿಸುತ್ತವೆ. ಕೃಷಿ, ಉತ್ಪಾದನೆ, ಮಾರುಕಟ್ಟೆ ಮತ್ತು ಸೇವಾ ಕ್ಷೇತ್ರಗಳಲ್ಲಿನ ಸಹಕಾರಿ ಸಂಸ್ಥೆಗಳು ಜನರ ಬದುಕಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವಲ್ಲಿ ನೆರವಾಗುತ್ತವೆ.

ಈ ಸಂಸ್ಥೆಗಳ ನಿಜವಾದ ಯಶಸ್ಸು ಕೇವಲ ಲಾಭದ ಪ್ರಮಾಣದಲ್ಲಿ ಅಳೆಯಲ್ಪಡುವುದಿಲ್ಲ. ಅವು ಎಷ್ಟು ಜನರ ಬದುಕಿನಲ್ಲಿ ಬದಲಾವಣೆ

ತಂದಿವೆ, ಎಷ್ಟು ಕುಟುಂಬಗಳಿಗೆ ಭರವಸೆಯಾಗಿವೆ, ಎಷ್ಟು ಜನರಲ್ಲಿ ಉಳಿತಾಯ ಮತ್ತು ಸ್ವಾವಲಂಬನೆಯ ಗುಣ ಬೆಳೆಸಿವೆ ಎಂಬುದರಲ್ಲಿಯೂ ಅವುಗಳ ಸಾಧನೆ ಅಡಗಿದೆ. ದೀಪಾವಳಿಯಲ್ಲಿ ಹಣತೆಯನ್ನು ಬೆಳಗಿಸುವುದಷ್ಟೇ ಸಾಕಾಗುವುದಿಲ್ಲ; ಅದು ನಿರಂತರವಾಗಿ ಉರಿಯಲು ಎಣ್ಣೆ ಮತ್ತು ಬತ್ತಿಯ ಅಗತ್ಯವಿದೆ. ಅದೇ ರೀತಿ ಸಹಕಾರಿ ಸಂಸ್ಥೆಗಳು ನಿರಂತರವಾಗಿ ಬೆಳೆಯಲು ಪಾರದರ್ಶಕ ಆಡಳಿತ, ಪ್ರಾಮಾಣಿಕ ನಾಯಕತ್ವ, ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ, ಆರ್ಥಿಕ ಶಿಸ್ತು ಮತ್ತು ಪರಸ್ಪರ ವಿಶ್ವಾಸ ಅತ್ಯಗತ್ಯ.

ಮಹಿಳಾ ಸಬಲೀಕರಣ ಮತ್ತು ಸಹಕಾರದ ಬೆಳಕು

ದೀಪಾವಳಿ ಮನೆಯ ಪ್ರತಿಯೊಬ್ಬರಿಗೂ ಸಂತೋಷವನ್ನು ಹಂಚುವ ಹಬ್ಬ. ಇದೇ ಆಶಯವನ್ನು ಸಹಕಾರ ಕ್ಷೇತ್ರದಲ್ಲಿ ವಿಸ್ತರಿಸಿದಾಗ ಮಹಿಳಾ ಸಬಲೀಕರಣದ ಮಹತ್ವ ಸ್ಪಷ್ಟವಾಗುತ್ತದೆ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದಾಗ ಕುಟುಂಬದ ನಿರ್ಧಾರಗಳಲ್ಲಿ ಅವರ ಪಾತ್ರ ಹೆಚ್ಚುತ್ತದೆ. ಆತ್ಮವಿಶ್ವಾಸ ಬೆಳೆಯುತ್ತದೆ. ಸಮಾಜದಲ್ಲಿ ಗೌರವ ಮತ್ತು ಸಮಾನ ಅವಕಾಶಗಳನ್ನು ಪಡೆಯುವ ದಾರಿಗಳು ತೆರೆದುಕೊಳ್ಳುತ್ತವೆ.

ಮಹಿಳಾ ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳು ಮಹಿಳೆಯರಿಗೆ ಉಳಿತಾಯ, ಸಾಲಸೌಲಭ್ಯ, ಉದ್ಯಮಶೀಲತೆ ಮತ್ತು ನಾಯಕತ್ವದ ಅವಕಾಶಗಳನ್ನು ಒದಗಿಸಬಲ್ಲವು. ಮನೆಯೊಳಗೆ ಮಾತ್ರ ಸೀಮಿತವಾಗಿದ್ದ ಅನೇಕ ಮಹಿಳೆಯರು ಸಹಕಾರದ ಮೂಲಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಕುಟುಂಬದ ಆದಾಯಕ್ಕೆ ಕೊಡುಗೆ ನೀಡುತ್ತಿದ್ದಾರೆ. ದೀಪದ ಬೆಳಕು ಒಂದು ಮೂಲೆಯಲ್ಲಿ ನಿಲ್ಲದೆ ಎಲ್ಲೆಡೆ ಹರಡುವಂತೆ, ಸಹಕಾರದ ಬೆಳಕು ಪ್ರತಿಯೊಬ್ಬ ಮಹಿಳೆಯ ಬದುಕಿಗೂ ತಲುಪಬೇಕು. ಮಹಿಳೆಯರ ಪ್ರತಿಭೆ, ಪರಿಶ್ರಮ ಮತ್ತು ನಿರ್ಧಾರ ಸಾಮರ್ಥ್ಯಕ್ಕೆ ಸೂಕ್ತ ಅವಕಾಶ ದೊರೆತಾಗ ಕುಟುಂಬ, ಸಂಸ್ಥೆ ಮತ್ತು ಸಮಾಜದ ಸಮಗ್ರ ಅಭಿವೃದ್ಧಿಗೆ ಬಲ ದೊರೆಯುತ್ತದೆ.

ಪರಿಸರಸ್ನೇಹಿ ದೀಪಾವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ

ದೀಪಾವಳಿಯ ನಿಜವಾದ ಸೌಂದರ್ಯವು ದುಬಾರಿ ಅಲಂಕಾರದಲ್ಲಾಗಲಿ, ಅತಿಯಾದ ಪ್ರದರ್ಶನದಲ್ಲಾಗಲಿ ಇಲ್ಲ. ಅದು ಪ್ರೀತಿಯನ್ನು ಹಂಚುವುದರಲ್ಲಿ, ಸಂಕಷ್ಟದಲ್ಲಿರುವವರಿಗೆ ನೆರವಾಗುವುದರಲ್ಲಿ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವುದರಲ್ಲಿ ಅಡಗಿದೆ. ಮಣ್ಣಿನ ಹಣತೆಗಳನ್ನು ತಯಾರಿಸುವ ಕುಂಬಾರರಿಗೆ ಪ್ರೋತ್ಸಾಹ ನೀಡುವುದು, ಸ್ಥಳೀಯ ಉತ್ಪನ್ನಗಳನ್ನು ಖರೀದಿಸುವುದು, ಅಗತ್ಯವಿರುವವರಿಗೆ ಆಹಾರ ಮತ್ತು ಬಟ್ಟೆಗಳನ್ನು ನೀಡುವುದು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಹಬ್ಬವನ್ನು ಆಚರಿಸುವುದು ಸಹಕಾರದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಾರ್ಗಗಳಾಗಿವೆ.

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು ಮತ್ತು ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಸ್ಥಳೀಯ ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುವುದು, ಸಣ್ಣ ಉದ್ಯಮಗಳನ್ನು ಪ್ರೋತ್ಸಾಹಿಸುವುದು ಮತ್ತು ಸಮುದಾಯದ ಅಭಿವೃದ್ಧಿಗೆ ಕೈಜೋಡಿಸುವುದು ದೀಪಾವಳಿಯ ಸಂಭ್ರಮವನ್ನು ಸಾಮಾಜಿಕ ಹೊಣೆಗಾರಿಕೆಯೊಂದಿಗೆ ಬೆಸೆಯುವ ಕಾರ್ಯಗಳಾಗಿವೆ.

ಸಹಕಾರದ ಜ್ಯೋತಿ ಸದಾ ಬೆಳಗಲಿ

ಇಂದು ಜಗತ್ತು ವೇಗವಾಗಿ ಬದಲಾಗುತ್ತಿದೆ. ಆರ್ಥಿಕ ಸ್ಪರ್ಧೆ, ವೈಯಕ್ತಿಕ ಹಿತಾಸಕ್ತಿ ಮತ್ತು ಸಾಮಾಜಿಕ ಅಂತರಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಸಹಕಾರದ ಮೌಲ್ಯಗಳು ಇನ್ನಷ್ಟು ಅಗತ್ಯವಾಗಿವೆ. ಎಲ್ಲವನ್ನೂ ಒಬ್ಬರೇ ಸಾಧಿಸಬಹುದು ಎಂಬ ಭಾವನೆಗಿಂತ, ಒಟ್ಟಾಗಿ ಪ್ರಯತ್ನಿಸಿದಾಗ ಎಲ್ಲರಿಗೂ ಒಳಿತಾಗುತ್ತದೆ ಎಂಬ ನಂಬಿಕೆ ಸಮಾಜದಲ್ಲಿ ಬಲಗೊಳ್ಳಬೇಕು.

ದೀಪಾವಳಿಯು ವರ್ಷಕ್ಕೊಮ್ಮೆ ನಮ್ಮ ಮನೆಗಳನ್ನು ಬೆಳಗಿಸುತ್ತದೆ; ಆದರೆ ಸಹಕಾರದ ಜ್ಯೋತಿ ಪ್ರತಿದಿನವೂ ನಮ್ಮ ಬದುಕಿನಲ್ಲಿ ಬೆಳಗುತ್ತಿರಬೇಕು. ನೆರೆಹೊರೆಯವರ ಸಂಕಷ್ಟಕ್ಕೆ ಸ್ಪಂದಿಸುವುದು, ಸಹೋದ್ಯೋಗಿಗಳಿಗೆ ನೆರವಾಗುವುದು, ದುರ್ಬಲರಿಗೆ ಆಸರೆಯಾಗುವುದು, ಸಾರ್ವಜನಿಕ ಹಿತವನ್ನು ಕಾಪಾಡುವುದು ಮತ್ತು ಪರಸ್ಪರ ಗೌರವದಿಂದ ನಡೆದುಕೊಳ್ಳುವುದು ಸಹಕಾರದ ನಿತ್ಯದ ಆಚರಣೆಗಳಾಗಬೇಕು.

ಸಹಕಾರದ ನಿಜವಾದ ಅರ್ಥವು ಒಬ್ಬರ ಏಳಿಗೆಯಲ್ಲಿ ಮತ್ತೊಬ್ಬರು ಸಂತೋಷ ಕಾಣುವುದರಲ್ಲಿ, ಸಾಮೂಹಿಕ ಯಶಸ್ಸಿನಲ್ಲಿ ಎಲ್ಲರೂ ಪಾಲುದಾರರಾಗುವುದರಲ್ಲಿ ಮತ್ತು ಯಾರೂ ಅಭಿವೃದ್ಧಿಯಿಂದ ವಂಚಿತರಾಗದಂತೆ ಪ್ರಯತ್ನಿಸುವುದರಲ್ಲಿ ಅಡಗಿದೆ. ದೀಪಾವಳಿ ಮತ್ತು ಸಹಕಾರ ಎರಡೂ ನಮಗೆ ಒಂದೇ ಜೀವನ ಸಂದೇಶವನ್ನು ನೀಡುತ್ತವೆ: ಬೆಳಕನ್ನು ಹಂಚಿದಷ್ಟೂ ಅದು ಹೆಚ್ಚುತ್ತದೆ; ಪ್ರೀತಿಯನ್ನು ಹಂಚಿದಷ್ಟೂ ಸಂಬಂಧಗಳು ಗಟ್ಟಿಯಾಗುತ್ತವೆ; ಸಹಕಾರವನ್ನು ಬೆಳೆಸಿದಷ್ಟೂ ಸಮಾಜ ಸಮೃದ್ಧವಾಗುತ್ತದೆ.

ಒಂದು ಪುಟ್ಟ ಹಣತೆ ಕತ್ತಲೆಯನ್ನು ದೂರ ಮಾಡುವಂತೆ, ಒಂದು ಪುಟ್ಟ ಸಹಾಯವೂ ಸಂಕಷ್ಟದಲ್ಲಿರುವ ವ್ಯಕ್ತಿಯ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸಬಲ್ಲದು. ಅನೇಕ ಹಣತೆಗಳು ಸೇರಿ ಬೆಳಕಿನ ಹಬ್ಬವನ್ನು ಸೃಷ್ಟಿಸುವಂತೆ, ಅನೇಕ ಜನರ ಪರಿಶ್ರಮ, ವಿಶ್ವಾಸ ಮತ್ತು ಒಗ್ಗಟ್ಟು ಸಮೃದ್ಧ ಸಮಾಜವನ್ನು ನಿರ್ಮಿಸಬಲ್ಲವು. ಈ ದೀಪಾವಳಿಯಲ್ಲಿ ನಮ್ಮ ಮನೆಗಳಲ್ಲಿ ಹಣತೆಗಳನ್ನು ಬೆಳಗಿಸುವುದರ ಜೊತೆಗೆ ಸಹಕಾರದ ಮೌಲ್ಯಗಳನ್ನು ಹೃದಯಗಳಲ್ಲಿ ಬೆಳಗಿಸೋಣ. ಸ್ವಾರ್ಥದ ಕತ್ತಲೆಯನ್ನು ತೊಡೆದು ಹಾಕಿ, ಸೇವೆಯ ಬೆಳಕನ್ನು ಹರಡೋಣ. ವೈಯಕ್ತಿಕ ಪ್ರಗತಿಯೊಂದಿಗೆ ಸಾಮೂಹಿಕ ಅಭಿವೃದ್ಧಿಯ ಸಂಕಲ್ಪ ಮಾಡೋಣ. ಸಹಕಾರಿ ಸಂಸ್ಥೆಗಳನ್ನು ಜನರ ವಿಶ್ವಾಸದ ಕೇಂದ್ರಗಳನ್ನಾಗಿ ರೂಪಿಸಿ, ಸಮಾನತೆ ಮತ್ತು ಸಮೃದ್ಧಿಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸೋಣ.

"ದೀಪಾವಳಿಯ ಬೆಳಕು ಮನೆಗಳನ್ನು ಬೆಳಗಿಸಲಿ; ಸಹಕಾರದ ಬೆಳಕು ಬದುಕುಗಳನ್ನು ಬೆಳಗಿಸಲಿ. ಒಗ್ಗಟ್ಟಿನ ಜ್ಯೋತಿ ಸಮಾಜವನ್ನು ಸಮೃದ್ಧಿಯೆಡೆಗೆ ಕೊಂಡೊಯ್ಯಲಿ."

ಸಹಕಾರದ ಸಂಭ್ರಮ – ಸಮೃದ್ಧಿಯ ಸಂಕಲ್ಪ; ದೀಪಾವಳಿಯ ಬೆಳಕು – ಸೌಹಾರ್ದದ ಹೊಳಪು.

ನಿಷ್ಟರಿಗೆ ಪ್ರೊತ್ಸಾಹ, ಭ್ರಷ್ಟರಿಗೆ ಶಿಕ್ಷೆ- ಹಾಗೂ ಸಹಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು - ಒಂದು ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಸಹಕಾರಿ ಸಂಸ್ಥೆಗಳ ನೋಂದಾಣಿ ಮಾಡುವಾಗ ಅಂತರರಾಷ್ಟ್ರೀಯ ಸಹಕಾರಿ ಒಕ್ಕೂಟ ಸ್ಥಾಪಿಸಿದ ಏಳು ಸಹಕಾರಿ ತತ್ವಗಳ ಆಧಾರದ ಮೇರೆ ರೂಪಿಸಿದ ನೀತಿ ಎಂದರೆ "ಎಲ್ಲರಿಗಾಗಿ ನಾನು ನನಾಗಾಗಿ ಎಲ್ಲರೂ". ಅಂದರೆ ಸಮಾನ ಮನಸ್ಕರು ತಮ್ಮ ಅತ್ಯಲ್ಪ ಸಂಪನ್ಮೂಲಗಳನ್ನು ಕ್ರೋಡೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಸಂಸ್ಥೆ. ಇಲ್ಲಿ ಎಲ್ಲಾ ಸದಸ್ಯರನ್ನು ಒಂದೇ ನೀತಿ ಅನ್ವಯಿಸತಕ್ಕದ್ದು.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ–1997ರಲ್ಲಿ ರಚಿಸಿದಾಗ, ರಾಷ್ಟ್ರದಲ್ಲಿಯೇ ಒಂದು ವಿಶೇಷ ಅರ್ಥವನ್ನು ನೀಡಿ, ಈ ಸಂಸ್ಥೆಗಳು "ಸ್ವಾಯತತ್ತೆ ಸ್ವಾತಂತ್ರ ಹಾಗೂ ಸ್ವಯಂ ನಿಯಂತ್ರಿತ" ಸಂಸ್ಥೆಗಳು ಎಂದು ಗುರುತಿಸಿ, ಜಾರಿ ಮಾಡಿದೆ. ಈ ನೀತಿಗೆ ಪೂರಕವಾಗಿ ನಿಬಂಧಕರು ದಿನ ನಿತ್ಯ ಮಧ್ಯ ಪ್ರವೇಶ ಮಾಡಲು ಅವಕಾಶ ನೀಡದೆ ಸಹಕಾರಿಗಳ ಆಯ್ಕೆ ಮಾಡಿದ "ಸಂಯುಕ್ತ ಸಹಕಾರಿ" ಎಂಬ ಪ್ರಜಾಪ್ರಭುತ್ವದಡಿ (ಕಾನೂನಿನಲ್ಲಿಯೇ) ಸ್ಥಾಪಿಸಿದ ಸಂಸ್ಥೆಗೆ ಸಹಕಾರಿಗಳ "ಸ್ನೇಹಿತ, ಮಾರ್ಗದರ್ಶಕ ಮತ್ತು ತತ್ವಜ್ಞಾನಿ"ಎಂದು ಗುರುತಿಸಿದೆ. ಅಂದರೆ ಸದಸ್ಯರೇ ಕ್ರೋಡೀಕರಿಸಿದ ಸಂಪನ್ಮೂಲವನ್ನು ಅಗತ್ಯವಿದ್ದ ಸದಸ್ಯರಿಗೆ ಆರ್ಥಿಕ ನೆರವು ನೀಡಿ ಅವರ ಆರ್ಥಿಕ ಬೆಳವಣಿಗೆಗೆಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದೆ.

ಆದರೆ ಈ ನೀತಿಯನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ವಿಮರ್ಷೆ ಮಾಡಬೇಕು. ಸಹಕಾರ ಸಂಸ್ಥೆ ನೋಂದಾಯಿಸುವಾಗ, ಅನುಸರಿಸುವ ನೀತಿ ಎಂದರೇ ಉಳ್ಳವರೇ ಸಂಸ್ಥೆ ಸ್ಥಾಪಿಸಿ, ಅದನ್ನು ದುರುಪಯೋಗಮಾಡಿಸ್ವಾಥಿರ್ಗಳಾಗುವುದೇ ನೀತಿಯಾಗದೆ. ಅಂದರೆ ಸದಸ್ಯರನ್ನು ಮಂಡಳಿ ಶೋಷಣೆ ಮಾಡುತ್ತಿದೆಯೋ, ಇದರ ವಿಮರ್ಷೆ ಈಗಿನ ಉದ್ದೇಶ ಅಲ್ಲ.

ಒಂದು ಸಹಕಾರಿ ಯಶಸ್ವಿಗೊಳಿಸಲು ಸದಸ್ಯರು ಜಾಗೃತರಾಗಿರಬೇಕು ಅವರನ್ನು ಮುನ್ನಡೆಸಲು ಜವಾಬ್ದಾರಿಯುತ ಆಡಳಿತ ಮಂಡಳಿ ಆಯ್ಕೆಯಾಗಬೇಕು ಮತ್ತು ಸದಸ್ಯರ ಅಗತ್ಯಗಳನ್ನು ಪೂರೈಸಲು ಬದ್ಧ ನೌಕರರು ಸೇರ್ಪಡೆಯಾಗಬೇಕು. ಅಂದರೆ ಸದಸ್ಯತ್ವ ಪಡೆದ ವ್ಯಕ್ತಿ, ಆ ಸಂಸ್ಥೆಯ ದಿನ ನಿತ್ಯದ ವ್ಯವಹಾರವನ್ನು ಗಮನಿಸಬೇಕು. ತಾನು ಹೂಡಿದ ಸಂಪನ್ಮೂಲವನ್ನು ಸಮರ್ಪಕವಾಗಿ ಆಡಳಿತ ಮಂಡಳಿ ನಿರ್ವಹಿಸುತ್ತಿದೆಯೇ ಎಂದು ಗಮನಿಸುತ್ತಿರಬೇಕು ಮತ್ತು ಆ ಸಂಸ್ಥೆಯ ನೌಕರರು ಸಂಸ್ಥೆಯ ಮೇಲೆ ಭದ್ದತೆಯಿಂದ ಕೆಲಸ ಮಾಡುತ್ತಿರುವುದನ್ನು ದೃಡೀಕರಿಸಿಕೊಳ್ಳಬೇಕು.

ಈ ಲೇಖನದ ಮುಖ್ಯ ಉದ್ದೇಶ ನೈಜ ಸದಸ್ಯರಿಗೆ, ಸಹಕಾರಿ ನೀಡುವ ಸೌಲತ್ತುಗಳನ್ನು ಪ್ರಮಾಣಿಕವಾಗಿ ನೀಡಬೇಕು ಅಂತಹ ಸೌಲತ್ತನ್ನು ಸಮರ್ಪಕವಾಗಿ ಉಪಯೋಗಿಸಲಾಗಿದೆ ಎಂದು ಮಂಡಳಿ ನೌಕರರ ಮೇಲೆ ನಿಗಾ ವಹಿಸಬೇಕು.

ಅದೇ ರೀತಿ ನೌಕರರು ಸದಸ್ಯರ/ಮಂಡಳಿಗೆ ಭದ್ದತೆಯಡಿ ಕೆಲಸ ಮಾಡಬೇಕು. ಸಹಕಾರಿಯಿಂದ ಪಡೆದ ಸೌಲತ್ತುಗಳನ್ನು ಸಮರ್ಪಕ ಉಪಯೋಗದಿಂದ ತನ್ನ ಆರ್ಥಿಕ ಬೆಳವಣಿಗೆಯಾಗಬೇಕು ಎಂಬುದೇ ನೀತಿ ನಿಷ್ಟರಿಗೆ ಪ್ರೋತ್ಸಾಹ : 70ರ ದಶಕದಲ್ಲಿ 1959ರ ಕಾಯಿದೆಯಲ್ಲಿ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಯಾವುದೇ ಸದಸ್ಯತಾನು ಪಡೆದ ಸಾಲ/ಬಡ್ಡಿ ಹಣವನ್ನು ಮರುಪಾವತಿ ಅವಧಿಗಿಂತ ಪೂರ್ವದಲ್ಲಿ ಪಾವತಿ ಮಾಡಿದರೆ, ಆ ಅವಧಿಗೆ ಸದಸ್ಯನಿಗೆ ಸೋಡಿ ಬಿಡುವ ವ್ಯವಸ್ಥೆ ಇತ್ತು. ಅದೇ ರೀತಿ ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿ, ಮಾಸಿಕ ಬಿಲ್ ಕಡೆಯ ದಿನಾಂಕಕ್ಕೆ ಮೊದಲೇ ಪಾವತಿ ಮಾಡಿದರೆ, ನಿಗದಿತ ಪ್ರಮಾಣದಲ್ಲಿ ವಿನಾಯ್ತಿ ನೀಡಲಾಗುತ್ತಿತ್ತು. ಅಂದರೆ ಪ್ರಮಾಣಿಕರಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು.

ಅಂದರೆ ವಾರ್ಷಿಕ ಕಂತು ಜೂನ್‌ನಲ್ಲಿ ಬಾಕಿಯಾದರೆ ಸದಸ್ಯ ಮಾರ್ಚ್‌ನಲ್ಲಿ ಮರು ಪಾವತಿ ಮಾಡಿದರೆ, ಆ ಮೂರು ತಿಂಗಳ ಅವಧಿಗೆ ನಿಗದಿ ಪಡಿಸಿದ ಬಡ್ಡಿದರದಿಂದ ವಿನಾಯ್ತಿ ನೀಡಲಾಗುತ್ತಿತ್ತು. ಅಂದರೆ ಪ್ರಾಮಾಣಿಕ ಸದಸ್ಯನಿಗೆ ಪ್ರೋತ್ಸಾಹ, ಈ ರೀತಿ ನೀಡುತ್ತಿತ್ತು. ಅದರಿಂದ ಸದಸ್ಯರ ನೈತಿಕತೆಗೆ ಬೆಲೆ ನೀಡಲಾಗುತ್ತಿತ್ತು.

ಈಗಿನ ಪರಿಸ್ಥಿತಿ :

80ರ ದಶಕದಲ್ಲಿ ಕೃಷಿ ಸಾಲ ಪಡೆದ ರೈತರು, ನೀಡಬೇಕಾದ ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡುವ ವ್ಯವಸ್ಥೆ ಪ್ರಾರಂಭವಾಯಿತು. ಆನಂತರದಲ್ಲಿ ಕೇಂದ್ರ ಸರ್ಕಾರ ರೂ 10000/–ಗಳ ಸಾಲವನ್ನು ಮನ್ನ ಮಾಡುವ ಯೋಜನೆ ರೂಪಿಸಿತು. ಅದೇ ರೀತಿ ರಾಜ್ಯ ಸರ್ಕಾರಗಳು ರೈತರ ಸಾಲವನ್ನು ಮನ್ನಾ ಮಾಡುವುದು ಅಥವಾ ಇಂತಿಷ್ಟೆ ಹಣದವರೆಗೆ ಮನ್ನಾ ಮಾಡುವುದು ಪ್ರಾರಂಭವಾಯಿತು. 90ರ ದಶಕದಲ್ಲಿ ರಾಜಕೀಯ ಪಕ್ಷಗಳು, ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುವುದಾಗಿ ಸೇರಿಸಿ ರೈತರ ಮತಗಳನ್ನು ಪಡೆಯಲು ಪ್ರಯತ್ನಿಸಿದವು ಈಗಲೂ ಅದೇ ನೀತಿ ಮುಂದುವರೆದಿದೆ.

ವಚನ ಭ್ರಷ್ಟರಿಗೆ ಪ್ರೋತ್ಸಾಹ :

ಪ್ರಮಾಣಿಕತೆಯಿಂದ ಸಾಲ ಮರುಪಾವತಿ ಮಾಡುತ್ತಿದ್ದ/ಮಾಡುತ್ತಿರುವ ಸದಸ್ಯರಿಗೆ ಇದು ಒಂದು ಪಾಠ ಕಲಿಸಿತು. ಅಂದರೆ ಪ್ರಮಾಣಿಕವಾಗಿ ಸಾಲ ಮರುಪಾವತಿ ಮಾಡಿದ ಸದಸ್ಯರಿಗೆ ಇಂತಹ ನೀತಿ ಒಂದು ಹಿನ್ನಡೆಯಾಯಿತು.

ಮರುಪಾವತಿ ಮಾಡಬೇಕೆಂದು ಶಕ್ತರಿದ್ದ ಸದಸ್ಯರೂ ಮನ್ನಾ ಆಗುತ್ತಿದೆಂದು, ಮರುಪಾವತಿ ಮಾಡಲು ಹಿಂಜರಿಯುತ್ತಿದ್ದಾರೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Permitted to Post under Periodical Post as per the Letter G3/14/RNP/2024-25 DATE 29.09.2025

ಒಮ್ಮೆ ತೀರಾವಳಿ ಸಾಲ ಯೋಜನೆ :

(One time settlement) 90ರ ದಶಕದಲ್ಲಿ ವಾಣಿಜ್ಯ ಬ್ಯಾಂಕ್‌ಗಳಿಗೆ ಈ ಯೋಜನೆ ರೂಪುಗೊಂಡು, ಸಹಕಾರ ಸಂಸ್ಥೆಗಳಿಗೂ ವಿಸ್ತಾರಗೊಂಡಿತು. ಇದರಿಂದ ಪ್ರಮಾಣಿಕ ವ್ಯಕ್ತಿಗಳಿಗೆ ಒಂದು ಹಿನ್ನಡೆಯಾಯಿತು. ಈ ಯೋಜನೆಯಿಂದ ಸುಸ್ಥಿದಾರರಿಗೆ ಪ್ರೇರಣೆ ನೀಡಿ ಮರುಪಾವತಿ ಮಾಡುವ ಚಿಂತನೆಯಿಂದ ಸದಸ್ಯರು ದೂರವಾದರು. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ರಾಜ್ಯದ ಒಂದು ಸರ್ಕಾರಿ ಸೌಮ್ಯದ ಹಣಕಾಸು ಸಂಸ್ಥೆ, ಈ ಯೋಜನೆಯಡಿ ರೂ 40 ಲಕ್ಷ ಸಾಲ ಬಾಕಿ, ಈ ಯೋಜನೆಯಡಿ ರೂ. 2 ಲಕ್ಷಕ್ಕೆ ಚುಕ್ತ ಮಾಡಿತು. ಇದರಿಂದ ಸಂಸ್ಥೆಗೆ ಮರುಪಾವತಿ ಮಾಡಿದ ವ್ಯಕ್ತಿಗಳಲ್ಲಿ ದಡ್ಡರೆಂಬ ನೀತಿಗೆ ಪ್ರೋತ್ಸಾಹ ನೀಡಿದಂತಾಗಿ, ಸುಸ್ತಿದಾರರೇ ಹೆಚ್ಚಿನ ಸಂಖ್ಯೆಯಲ್ಲಿ ಮುಂದುವರೆದರು. ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ತಂದ ಎನ್.ಪಿ.ಎ ನೀತಿಯೂ ಕಾರಣ ಇರಬಹುದು. ಇದರಲ್ಲಿ ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿ ಆಗದಿದ್ದರೆ, ಅದನ್ನು ಲೆಕ್ಕಾ ಪುಸ್ತಕದಲ್ಲಿ ವಜಾ ಮಾಡಲಾಗಿದೆ ಎಂದು ತೋರಿಸಿ, ಸಂಸ್ಥೆಯ ಆರ್ಥಿಕ ತಃಖ್ತೆಗಳಲ್ಲಿ ತೋರಿಸಿದರೂ, ವಸೂಲಿ ಮುಂದುವರಿಸುವ ಅವಕಾಶ ಕಲ್ಪಿಸಬೇಕು. ಇಂತಹ ಯೋಜನೆಯಡಿ ಸರ್ಕಾರಿ ಸೌಮ್ಯದ ವಾಣಿಜ್ಯ ಬ್ಯಾಂಕ್‌ಗಳು ತಮ್ಮ ಆರ್ಥಿಕ ತಃಖ್ತೆಗಳಲ್ಲಿ ಆರೋಗ್ಯಕರವಾಗಿ ತೋರಿಸಿ, ಸಾರ್ವಜನಿಕರಿಗೆ ಬ್ಯಾಂಕ್‌ಗಳ ಬಗ್ಗೆ ನಂಬಿಕೆ ತೋರಿಸಲು ಅವಕಾಶ ಪಡೆದವು. ಅದೇ ನೀತಿಯನ್ನು ಸಹಕಾರಿ ಬ್ಯಾಂಕ್‌ಗಳಿಗೂ ಭಾರತೀಯ ರಿಸರ್ವ್ ಬ್ಯಾಂಕ್ ಅಳವಡಿಸಿದೆ.

ಇದರ ಜೊತೆಗೆ ಇತ್ತೀಚೆಗೆ ಎಲ್ಲಾ ರಾಜಕೀಯ ಪಕ್ಷಗಳು ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ "ಉಚಿತ ಭಾಗ್ಯ" ಗಳನ್ನು ಕಲ್ಪಿಸುತ್ತಿವೆ. ಅಂದರೆ ರಾಜ್ಯದ ಅಭಿವೃದ್ಧಿ ಹಣವನ್ನು ಉಚಿತ ಭಾಗ್ಯಗಳಿಗೆ ನೀಡಿದರೆ, ಪ್ರಜೆಗಳು ನೀಡಿದ ತೆರಿಗೆ ಹಣವನ್ನು ರಾಜಕೀಯ ಉದ್ದೇಶಕ್ಕೆ ಬಳಸಿ ಸ್ವಾರ್ಥ ಸಾಧನೆಗೆ ಅವಕಾಶ ನೀಡಿದಂತೆ.

ಉಪ ಸಂಹಾರ :

ರಾಜ್ಯ ಸರ್ಕಾರ ಕೃಷಿಗೆ ಸಂಬಂಧಿಸಿದಂತೆ ರೈತರಿಗೆ ಕೃಷಿ ಸಾಲದ ಮೇಲಿನ ಶೇ 5% ರಷ್ಟು ಬಡ್ಡಿಯನ್ನು ಉಚಿತವಾಗಿ ನೀಡಿರೂ 5 ಲಕ್ಷ ಸಾಲದ ಮೇಲೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿದೆ. ಇದರಿಂದ ಕೃಷಿಗೆ ಉತ್ತೇಜನ ನೀಡಿದಂತೆ ಆಗ ಅಭಿವೃದ್ಧಿ ಪೂರಕವಾಗಿದೆ. ಅದೇ ರೀತಿ ಹೈನುಗಾರಿಕೆ ಸದಸ್ಯರಿಗೆ ಪ್ರತಿ ಲೀಟರ್ ಹಾಲು ಸರಬರಾಜಿಗೆ ರೂ5/– ಪ್ರೋತ್ಸಾಹಧನ ನೀಡುವುದು. ಇವು ಅಭಿವೃದ್ಧಿಗೆ ಪೂರಕ ಏಕೆಂದರೆ, ಪ್ರಜೆಗಳು ಗ್ರಾಮೀಣ ಪ್ರದೇಶದಲ್ಲಿ ಇಂತಹ ವೃತ್ತಿಯಲ್ಲಿ ತೊಡಗಿಕೊಂಡರೆ ಪಟ್ಟಣಕ್ಕೆ ವಲಸೆ ಹೋಗುವುದನ್ನು ತಪ್ಪಿಸಬಹುದು ಮತ್ತು ಹೆಚ್ಚು ಉತ್ಪಾದನೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗಾರಿಕೆಗಳನ್ನು ಸ್ಥಾಪಿಸಲು, ಕಡಿಮೆ ದರದಲ್ಲಿ ಭೂಮಿ, ಬಂಡವಾಳ ಹೂಡಿಕೆಯನ್ನು ಶೇ 25% ವರೆಗೆ ಪ್ರೋತ್ಸಾಹ ಧನ ನೀಡುವುದು ಇತ್ಯಾದಿಗಳನ್ನು ನೀಡಿ, ರಾಜ್ಯದ ಜನರಿಗೆ ನೌಕರಿ ನೀಡುತ್ತದೆ ಎಂಬ ಕಾರಣ ನೀಡಿ ಬಂಡವಾಳ ಶಾಹಿಗಳಿಗೆ ನೀಡುವುದರಕ್ಕಿಂತ, ರೈತಾರಿಗೆ/ಹೈನುಗಾರಿಕರಿಗೆ ನೀಡಿದ ಪ್ರೋತ್ಸಾಹವೇ ಮೌಲ್ಯಯುತ ಎಂಬುದನ್ನು ರಾಜ್ಯ/ಕೇಂದ್ರ ಸರ್ಕಾರಗಳು ತಿಳಿಯುವುದು ಅವಶ್ಯಕ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003